ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೫, ಸಂಚಿಕೆ ೨, ಜುಲೈ ೨೦೧೭

ಕನ್ನಡವನ್ನು ಹೊದ್ದರೆ ಸಾಲದು ಕನ್ನಡಿಗ ನೀನಾಗಬೇಕು

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಸಿಡ್ನಿ ಸುದ್ದಿಗಳು ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೮

ರಾಂ ರಾಮ ... ಪು. ೯

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೧೨

ಕಾವ್ಯ ಚಿಲುಮೆ ... ಪು. ೧೩

ಚಿಲುಮೆಯ ಒಳಗೆ

ಪದಪುಂಜ ... ಪು. ೧೪

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೨೦

ಕಥೆ - ಕಥೆಯಾದವನು - ಪುಟ ೧೬

ಮನೆಯಲ್ಲಿ ಬೆಣ್ಣೆ ತಯಾರಿಸಿ - ಪುಟ ೩

ಸಂಪಾದಕೀಯ

ಬದರಿ
ತ್ಯಾಮಗೊಂಡ್ಲು

ಭಾಷೆಯ ಬಗ್ಗೆ ಹೃದಯವು ಮಿಡಿಯುವುದು ಸಹಜ. ಆ ಒಂದು ಭಾವಬಂಧವೇ ನಮ್ಮ ನುಡಿಯ ಮೇಲೆ ನಮಗಿರುವ ಪ್ರೀತಿಯು ಎಷ್ಟೆಂದು ತೋರಿಸಿ, ಅದಿನ್ನೂ ಜೀವಂತವಿದೆ ಎನ್ನುವುದಕ್ಕೆ ದ್ಯೋತಕವಾಗಿರುತ್ತದೆ. ಆ ಉತ್ಕಟ ಅಭಿಮಾನವೇ ಭಾಷೆಯ ಉಳಿವಿಗೂ ಬಹಳ ಸಹಕಾರಿ. ಎದೆ ತಟ್ಟಿಕೊಂಡು "ಇದು ನನ್ನ ಭಾಷೆ" ಎನ್ನುವ ಆ ಮಮತೆಯಿಂದಲೇ ಅದರೊಂದಿಗಿನ ಆತ್ಮೀಯತೆಯು ಸಾಕಾರವಾಗಿ ಸದಾ ಜಾಗೃತವಾಗಿರುವಂತೆ ಮಾಡುತ್ತದೆ. ಆದರೆ ಅದು ಎದೆಯಾಳದಿಂದ ಬರಬೇಕು. "ಬಾರಿಸು ಕನ್ನಡ ಡಿಂಡಿಮವ" ಎನ್ನುವಲ್ಲಿ ಆ ಹೃದಯ ಶಿವನೇ ನಮ್ಮಲ್ಲಿ ಡಮರುಗವನ್ನು ಬಾರಿಸುತ್ತಿದ್ದಾನೇನೋ ಎಂದು ಭಾಸವಾಗಬೇಕು.

ಇಷ್ಟೊಂದು ಒತ್ತು ಕೊಡುವ ಉದ್ದೇಶವಿಷ್ಟೇ. "ಕನ್ನಡ" ಎನ್ನುವ ನಮ್ಮ ನುಡಿಯ ಬೆಗೆಗಿನ ಅಭಿಮಾನವು ಯಾರೋ ಹೇಳಿಕೊಟ್ಟು ಕಲಿಸಿಕೊಡುವಂತಹ ಒಂದು ವಿದ್ಯೆಯಲ್ಲ. ಬದಲಾಗಿ ನಮ್ಮ ಹೆತ್ತಮ್ಮನನ್ನು ಹುಟ್ಟಿದಾಗಿನಿಂದ ಹೇಗೆ ಆದರಿಸಿಕೊಂಡು ಬರುವೆವೋ ಅಂತಹುದೇ ಅವಿನಾಭಾವ ಸಂಬಂಧವು ನಮ್ಮ ಭಾಷೆಯಯೊಂದಿಗಿರಬೇಕು. ಆಗಷ್ಟೇ ಕನ್ನಡಮ್ಮನು ನಮ್ಮ ತಾಯಿ, ನಾವು ಆಕೆಯ ಮಕ್ಕಳು ಎನ್ನುವುದರಲ್ಲಿ ಅರ್ಥವಿರುತ್ತದೆ. ಇಲ್ಲಿದ್ದರೆ ಕೇವಲ ಹಳದಿ ಕೆಂಪು ಬಣ್ಣಕ್ಕೋ, ಒಂದಷ್ಟು ಸಂಘಟನೆಗಳ ನಂಟಿಗೋ, ಇಲ್ಲಾ ಹೊಸ ಧ್ವಜ ಬೇಕೆಂಬ ಕೂಗಿಗೋ ನಮ್ಮ ಕನ್ನಡ ಪ್ರೀತಿ ಅಂಟಿಕೊಂಡು, ಅಲ್ಲೇ ನಿಂತ ನೀರಾಗುತ್ತದೆ ಹೊರತು ಜೀವನದಿಯಂತೆ ಹರಿಯುವುದಿಲ್ಲ.

ಇತ್ತೀಚೆಗೆ ಬಿಡುಗಡೆಯಾದ ಸ್ಪೈಡರ್ ಮ್ಯಾನ್ ಕಥೆಯಾಧಾರಿತ ಚಲನಚಿತ್ರದಲ್ಲಿ ಒಂದು ಮಾತಿದೆ. "ನೀನು ಈ ವೇಷವಿಲ್ಲದೆ ಏನೂ ಅಲ್ಲವಾದರೆ, ಈ ವೇಷವನ್ನು ಧರಿಸಲು ಅನರ್ಹನು" ಎಂಬರ್ಥ ಕೊಡುವ ವಾಕ್ಯವು ಇಂದಿನ ಕನ್ನಡ ಹೋರಾಟಕ್ಕೆ ಹೋಲಿಸಬಹುದೇನೋ. ಹೇಗೆ ಆ ಚಲನಚಿತ್ರದಲ್ಲಿ ಸ್ಪೈಡರ್ ಮ್ಯಾನ್ ವೇಷ ಧರಿಸಿದರೆ ಮಾತ್ರ ಆ ವ್ಯಕ್ತಿ ತಾನು ಶಕ್ತಿವಂತ ಎಂದು ತಿಳಿದಿರುತ್ತಾನೋ, ಹಾಗೆಯೇ ಆಗಿದೆಯೇನೋ ಕನ್ನಡದ ಪರಿಸ್ಥಿತಿ. ಕೇವಲ ನವೆಂಬರ್ ಕನ್ನಡಿಗರಾಗೋದು ಬೇಡ ಎಂದು ಸಾರಿ ಸಾರಿ ಸಹಸ್ರಾರು ಜನರು ಹೇಳಿದರೂ, ಮತ್ತೆ ಆ ಸಣ್ಣ ಪುಟ್ಟ ಹಾರಾಟ ಹೋರಾಟಗಳಿಗೆ ನಮ್ಮ ಶಕ್ತಿಯನ್ನು ಕುಂದಿಸುತ್ತಿದ್ದೀವೇನೋ. ನಮ್ಮೊಳಗೆ ಆ ಭಾಷಾ ಪ್ರಜ್ಞೆ ಸತ್ತಂತೆ ಬಿದ್ದಿದ್ದರೆ, ನಾವೇ ಬಡಿದೆಬ್ಬಿಸೋಣ. ಅದಕ್ಕೆ ಧ್ವಜವೋ, ಪತಾಕೆಯೋ ಬೇಕೇ?

ನೆನೆಪಿಡೋಣ, ತೋರಿಕೆಯ "ಕನ್ನಡವೆನ್ನುವ ಉಡುಪನ್ನು" ತೊಟ್ಟರೆ ಸಾಲದು, ನಮ್ಮೊಳಗಿನ ಕನ್ನಡಿಗನನ್ನು ಎಬ್ಬಿಸಬೇಕು. ಆಗಷ್ಟೇ ನಾನು ಕನ್ನಡಿಗ ಎಂದು ಹೇಳಬಹುದು. ▪

ಎರಡು ತಿಂಗಳ ಪ್ರಮುಖ ದಿನಗಳು

ಜುಲೈ ಶ್ರೀ ಹೇವಿಳಂಬಿ ನಾಮ ಸಂವತ್ಸರ, ಉತ್ತರಾಯಣ/ದಕ್ಷಿಣಾಯನ, ಗ್ರೀಷ್ಮ/ವರ್ಷ ಋತು, ಆಶಾಢ/ಶ್ರಾವಣ ಮಾಸ

04 ಮಂ - ದೇವಕಯನೀ ಏಕಾದಶಿ
09 ಭಾ - ವ್ಯಾಸ ಹುಣ್ಣಿಮೆ, 12 ಬು - ಸಂಕಷ್ಟ ಚತುರ್ಥಿ
15 ಶ - ಬಾಲ ಗಂಗಾಧರ ತಿಲಕ್ ಜನ್ಮ ದಿನ
19 ಬು - ಕಾಮಿಕಾ ಏಕಾದಶಿ, 23 ಭಾ - ಭೀಮನ ಅಮಾವಾಸ್ಯೆ
24 ಸೋ - ಶ್ರಾವಣ ಮಾಸಾಆರಂಭ
25 ಮಂ - ಮಂಗಳ ಗೌರೀ ವ್ರತ
28 ಶು - ನಾಗ ಗರುಡ ಪಂಚಮಿ

ಆಗಸ್ಟ್ ಶ್ರೀ ಹೇವಿಳಂಬಿ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ/ಭಾದ್ರಪದ ಮಾಸ

01 ಮಂ - ಮಂಗಳ ಗೌರೀ ವ್ರತ 03 ಗು - ಪವಿತ್ರಾ ಏಕಾದಶಿ
04 ಶು - ಶ್ರೀ ವರಮಹಾಲಕ್ಷ್ಮೀ ವ್ರತ
07 ಸೋ - ರಕ್ಷಾ ಬಂಧನ/ಹುಣ್ಣಿಮೆ / ಚಂದ್ರ ಗ್ರಹಣ
08 ಮಂ - ಮಂಗಳ ಗೌರೀ ವ್ರತ
09 ಬು - ಶ್ರೀ ರಾಘವೇಂದ್ರ ಸ್ವಾಮೀ ಆರಾಧನೆ
11 ಶು - ಸಂಕಷ್ಟ ಚತುರ್ಥಿ, 14 ಸೋ - ಶ್ರೀಕೃಷ್ಣ ಜನ್ಮಾಷ್ಟಮಿ
15 ಮಂ - ಮಂಗಳ ಗೌರೀ ವ್ರತ/ಭಾರತ ಸ್ವಾತಂತ್ರ್ಯ ದಿನ
18 ಶು -ಅಜಾ ಏಕಾದಶಿ 21 ಸೋ - ಬೆನಕನ ಅಮಾವಾಸ್ಯೆ
22 ಮಂ - ಭಾದ್ರಪದ ಮಾಸ ಆರಂಭ
24 ಗು - ಸ್ವರ್ಣಗೌರೀ ವ್ರತ 25 ಶು - ಶ್ರೀ ವರಸಿದ್ಧಿವಿನಾಯಕ ವ್ರತ

ಹರಿದಾಸರ ಸಂಗ ದೊರಕಿತು ಎನಗೀಗ

ಸುಮಾರು ಮೂರು ತಿಂಗಳಿಂದ ಹರಿದಾಸ ಸಾಹಿತ್ಯ ಹಾಗು ಕರ್ನಾಟಕ ಶಾಸ್ತ್ರೀಯ ಸಂಗೀತದ ವಿದ್ಯಾನಿಧಿಯಾದ ಡಾ ।। ವಿದ್ಯಾಭೂಷಣ ರ ಕಾರ್ಯಕ್ರಮವನ್ನು ಎದುರು ನೋಡುತ್ತಿದ್ದ ಸಿಡ್ನಿ ನಗರದ ನಿವಾಸಿಗಳು ಕಡೆಗೂ ಬಂದೇ ಬಿಟ್ಟಿತು . ಸಿಡ್ನಿ ಕನ್ನಡ ಶಾಲೆ ಆಯೋಜಿಸಿದ್ದ, ಶ್ರೀ ರಾಘವೇಂದ್ರ ಭಕ್ತ ಮಂಡಳಿ ಹಾಗು ಶ್ರೀ ಶಂಕರ ಸೇವಾ ಸಮಿತಿ ಅವರ ಸಹಯೋಗದಿಂದ ವಾಟ್ಟಲ್ ಗ್ರೋವ್ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುಮಾರು ೪೫೦ ಕ್ಕೂ ಹೆಚ್ಚು ಜನ ಎರಡೂವರೆ ಘಂಟೆಗಳ ಕಾಲ ದಾಸ ಸಾಹಿತ್ಯದ ಅಮೃತ ವನ್ನು ಸವಿದು ನಲಿದರು.

ವರಗುರು ಉಪದೇಶ ನೆರವಾಯಿತೆನಗೀಗ

ಶ್ರೀಮತಿ ಪೂರ್ಣಿಮಾ ಭಟ್ ಹಾಗು ಶ್ರೀಮತಿ ಉಮಾ ಕಟ್ಟಿವರು ಶ್ರೋತೃಗಳ ಸ್ವಾಗತ ಕೋರಿ ಕಲಾವಿದರ ಪರಿಚಯ ನೀಡಿದರು. ಸರಸ್ವತಿಯನ್ನು ಆಹ್ವಾನಿಸುತ್ತ "ವರವ ಕೊಡು ಎನಗೆ ವಾಗ್ದೇವಿ " ಎಂಬ ಕನಕದಾಸರ ಪದದಿಂದ ಕಛೇರಿ ಪ್ರಾರಂಭವಾಯಿತು. ನಂತರ ವಾದಿರಾಜ ವಿರಚಿತ "ಕೊಂಡಾಡಲಳವೇ ನಿನ್ನಯ ರೀತಿ". ನಂತರ ಜನರ ಮೆಚ್ಚಿನ "ನಾರಾಯಣ ನಿನ್ನ ನಾಮದ" ಹಾಗು "ಇಷ್ಟು ದಿನ ಈ ವೈಕುಂಠ " ಕೇಳಿಸಿ ದೇವರ ಹುಡುಕಾಟ ಪಂಚೇಂದ್ರಿಯಗಳಿಂದ ಸಾಧ್ಯವಿಲ್ಲ ಎನ್ನುವ "ಎಲ್ಲಿ ನೋಡಿದರಲ್ಲಿ ರಾಮ" - ಪ್ರತಿಯೊಂದು ಚರಣದ ಪದಗಳ ಅಂದದ ಅರ್ಥ ವಿವರಿಸುತ್ತಾ ಹಾಡಿದರು, ಇದು ಈ ಕಾರ್ಯಕ್ರಮದ "highlight" ಎನ್ನಬಹುದು.

ಜಲಜನಾಭನ ಧ್ಯಾನ ಹೃದಯದೊಳ್ ದೊರಕಿತು

"ದಾರಿ ಯಾವುದಯ್ಯ ವೈಕುಂಠಕೆ", "ಸತ್ಯವಂತರ ಸಂಘವಿರಲು ತೀರ್ಥವೇತಕೆ", " ಈಸಬೇಕು ಇದ್ದು ಜೈಸಬೇಕು", "ಆವ ರೋಗವು ಎನಗೆ ದೇವ ಧನ್ವಂತರಿ", " ನೀ ಎಲ್ಯಾಡಿ ಬಂದೆ ರಂಗಯ್ಯ" ಗಳ ಮಧ್ಯೆ ಸುಂದರವಾದ ಉಗಾಭೋಗ ಗಳನ್ನೂ ಪೋಣಿಸುತ್ತಾ ಹೋದರು. ಈ ಹಾಡುಗಳನ್ನ ಅವರ ಸಿಡಿ ಕೇಳಿದ ಶ್ರೋತೃಗಳಿಗೆ ಅಂದು ಭಾವದ ಜೊತೆ ಅವರು ಹಾಕಿದ ಕಲ್ಪನಾ ಸ್ವರಗಳಿಗೆ ಮತ್ತಷ್ಟು ಮೆರುಗನ್ನು ಕೊಟ್ಟಿತು.
ಪಿಟೀಲು ವಾದಕರಾದ ರಘುರಾಮ್ ಹಾಗು ಮೃದಂಗದಲ್ಲಿ ಸಾಯಿನಾಥ್ ಇವರಿಬ್ಬರ ಜೋಡಿ ಕೊಟ್ಟ ಆಲಾಪ ಹಾಗು ತನಿ ಆವರ್ತನೆ ಅದ್ಭುತವಾಗಿತ್ತು, ಖುಷಿ ಕೊಟ್ಟಿತು, ಕೇಳುಗರ ಚಪ್ಪಾಳೆ ಹಲವಾರು ಬಾರಿ ಗಿಟ್ಟಿಸಿತು.

ಏನೆಂದು ಹೇಳಲಿ ಆನಂದ ಸಂಭ್ರಮ

ಸತತ ೨ ಗಂಟೆಗಳ ಕಾಲ ಹಾಡಿದ ನಂತರ ವಂದನಾರ್ಪಣೆ ಮಾಡಿದ ಕನಕಪುರ ನಾರಾಯಣ್ - ಕಲಾವಿದ ತ್ರಯರಿಗೆ (ಶ್ರೀ ಅನಂತ ರಾವ್ ಅವರಿಂದ) ಶಾಲು ಹೊದಿಸಿ ಹಾಗು ನೆನಪಿನ ಕಾಣಿಕೆ ಕೊಡುತ್ತಾ ಸಿಡ್ನಿ ನಗರದ ಜನರ ಪರವಾಗಿ ಗೌರವ ಸಲ್ಲಿಸಿದರು. ಇಷ್ಟು ದಿನ ಈ ಕಾರ್ಯಕ್ರಮಕ್ಕೆ ಕಾದ ಜನ ಅಯ್ಯೋ ಮುಗೀಲಿಕ್ಕೆ ಬಂತಲ್ಲ ಅನ್ನುವ ಭಾವನೆ ಎದ್ದು ಕಾಣುತಿತ್ತು.

ಚಿನ್ಮಯ ಪುರಂದರ ವಿಠ್ಠಲಯ್ಯ ದೊರಕಿದ

ಶ್ರೀಪಾದರಾಯರ ಮೊದಲುಗೂಡಿ ಉಗಾಭೋಗಗಳು ಹರಿಯುತ್ತಿದ್ದ ಸಭೆಯಲ್ಲಿ "ಮನೆಯಿಂದ ಸಂತೋಷ ಕೆಲವರಿಗೆ ಲೋಕದಲಿ... ಇನಿತು ಸಂತೋಷ ಅವರವರಿಗಾಗಲಿ, ನಿನ್ನ ನೆನೆವೊ ಸಂತೋಷ ಎನಗಾಗಲಿ ನಮ್ಮ ರಂಗ ವಿಠ್ಠಲ" ಮಧುಕರ ವೃತ್ತಿಯ ಸೊಬಗನ್ನು ಎತ್ತಿ ಹಿಡಿದಿತ್ತು. ಅದೇ ಪುರಂದರ ದಾಸರ ಉಗಾಭೋಗ "ನೀ ತಂದೆ ನಾ ಬಂದೆ ನಿನ್ನ ಹಿಂದೆ " ಪ್ರಾಸ ಶ್ಲೇಷ ಗಳ ನಡುವೆ ಶರಣಾಗತಿಯೇ ಮೋಕ್ಷಕ್ಕೆ ದಾರಿ ಎಂಬ ಅರ್ಥವು ಬರುವ ಇದರ ಸಾಲುಗಳು, ಅವರ ದನಿಯಲ್ಲಿ ವೈರಾಗ್ಯ ಭಾವ ಕೇಳಿದವರದೇ ಪುಣ್ಯ ಎನ್ನುವಂತಿತ್ತು.
"ಪಿಳ್ಳಂಗೋವಿಯ" , "ಬಾರೆ ನಮ್ ಮನೀ ತನಕ" , "ಹಲವು ಜೀವನವ ಒಂದೆಲೆ ನುಂಗಿತು", "ಗುಬ್ಬಿಯಾಡೋ" ಮುಂತಾದ ಅತ್ಯಂತ ಜನಪ್ರಿಯ ಗೀತೆಗಳನ್ನು ಕೊನೆಯಲ್ಲಿ ಹಾಡಿ ಜನರ ದಾಹ ತಣಿಸಿದರು. ಚಿಟಿಕೆ , ಕೋಲು ಹಿಡಿದು - ಹರಿದಾಸರು ಯಾವ ಸಾಧನವೂ ಬಿಟ್ಟಿಲ್ಲ, ಎಲ್ಲ ರೀತಿಯ ಸಂಗೀತವನ್ನು ಭಕ್ತಿ ಮಾರ್ಗಕ್ಕೆ ಉಪಯೋಗಿಸಿದರು ಎಂದು ಹೇಳುತ್ತಾ "ಕೋಲು ಕೋಲೆನ್ನ ಕೊಲೆ" ಹಾಡಿದಾಗ ಜನರು ಕೈ ಜೋಡಿಸಿ ತಾಳಕ್ಕೆ ತಾಳ ಹಾಕಲಾರಂಭಿಸಿದರು, ಕೋಲಾಟಕ್ಕೆ ಸಜ್ಜಾಗೇ ಬಿಟ್ಟರು. ಹಾಡು ಮುಗಿಯುತ್ತಿದ್ದ ಹಾಗೆಯೇ "ಭಾಗ್ಯದ ಲಕ್ಷ್ಮಿ" ಯನ್ನು ಕರೆದು, "ಶುಭವಿದು ಶೋಭನ ಹರಿಗೆ" ಹಾಡಿ ಮಂಗಳ ಹೇಳಿದರು.

ಇನ್ನೇನು ಇನ್ನೇನು

ಕೊನೆಯಲ್ಲಿ "standing ovation". ನೆರೆದ ಜನರು ತಮ್ಮ ಗೌರವ ವನ್ನು ಹಲವು ನಿಮಿಷ ಚಪ್ಪಾಳೆಯೊಂದಿಗೆ ಸಲ್ಲಿಸಿದರು. ವಿಶೇಷ ಅಂದರೆ ಸಣ್ಣ ಮಕ್ಕಳು ಆಟ ಆಡುವುದು, ಅಳುವುದನ್ನು ನಿಲ್ಲಿಸಿ ಹಾಡುಗಳನ್ನ ಕೇಳಿದ್ದು ಡಾ । ವಿದ್ಯಾಭೂಷಣರ ಕಂಠ, ಗಾಯನ ಹಾಗು ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಅವರಿಂದ ಆಶೀರ್ವಾದ ಪೂರಕವಾಗಿ ಫಲವನ್ನು ಸ್ವೀಕರಿಸಿ ಲಘು ಉಪಹಾರ ಮಾಡಿ ಮನೆಗೆ ಹೊರಟರು. ▪

ಛಾಯ ಚಿತ್ರಗಳು ಮುಂದಿನ ಪುಟದಲ್ಲಿ ...

ವಿದ್ಯಾಭೂಷಣರ ಸಂಗೀತ ಸಂಜೆ – ಛಾಯಾ ಚಿತ್ರಗಳು

ವಿದ್ಯಾಭೂಷಣರ ಸಂಗೀತ ಸಂಜೆ – ಛಾಯಾ ಚಿತ್ರಗಳು

ಮಾಜಿಕ್ ಷೋ

ಕನಕಾಪುರ ನಾರಾಯಣ

ಪುಟ್ಟ ಮಕ್ಕಳಿಂದ ಹಿಡಿದು ಮುದುಕರೂ ಸಂತೋಷ ಪಡುವ ಮನರಂಜನೆ ಎಂದರೆ ಮಾಜಿಕ್ ಷೋ ಮಾತ್ರವೇ ಸರಿ.ಸಿಡ್ನಿ ಕನ್ನಡ ಶಾಲೆಯ ಮಕ್ಕಳಿಗಾಗಿ ಏರ್ಪಡಿಸಿದ್ದ ಉಚಿತ ಇಂದ್ರಜಾಲ ಪ್ರದರ್ಶನ ಕಳೆದ ೨೪ ನೇ ಜೂನ್ ವಾಟಾಲ್ ಗ್ರೋವ್ ಸಾರ್ವಜನಿಕ ಶಾಲೆಯಲ್ಲಿ ಏರ್ಪಡಿಸಲಾಗಿತ್ತು. ಸಂಜೆ ೪ ಘಂಟೆಗೆ ಸರಿಯಾಗಿ ಆರಂಭವಾದ ಈ ಪ್ರದರ್ಶನದಲ್ಲಿ ನೆರೆದ ಮಕ್ಕಳು ಮತ್ತು ಅವರ ಪೋಷಕರನ್ನು ರಂಜಿಸಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದವರು ಮಾಂತ್ರಿಕರಾದ ದರ್ಶನ ಮತ್ತು ಅವರ ಜೊತೆಯಾಗಿ ಆಸ್ಟ್ರೇಲಿಯಾಕ್ಕೆ ಪ್ರಾವಾಸಿಗರಾಗಿ ಬಂದಿದ್ದ ಅವರ ತಂದೆ ಶ್ರೀ ಸತ್ಯಮೂರ್ತಿ ಅವರುಗಳು. ಸಿಡ್ನಿಯಲ್ಲಿ ನಮ್ಮ ಕನ್ನಡ ಭಾಷೆಯಲ್ಲಿ ಮಾತನಾಡುತ್ತಾ ಇಬ್ಬರೂ ಮಾಡಿದ ಟ್ರಿಕ್ ಗಳು ನೋಡುಗರ ಮನ ಸೂರೆ ಮಾಡಿತು. ಅಚ್ಚರಿಯ ವಿಷಯವೆಂದರೆ ಇಂದ್ರಜಾಲವನ್ನು ಹತ್ತಿರದಿಂದ ನೋಡಲು ಮಕ್ಕಳು ಮುಂದಿನ ಸಾಲಿನಲ್ಲೇ ಕುಳಿತು ನಗುನಗುತ್ತಾ, ಕೂಗುತ್ತಾ, ಚಪ್ಪಾಳೆ ತಟ್ಟುತ್ತಾ ಅನುಭವಿಸಿದ ಕ್ಷಣಗಳು ನೋಡುಗರಿಗೆ ಮುದ ನೀಡಿತ್ತು.

ಒಂದಕ್ಕಿಂತಾ ಒಂದರಂತೆ ಚೆಂದದ ಟ್ರಿಕ್ ಗಳು, ಅಚ್ಚರಿ ಮೂಡಿಸುವ ಟ್ರಿಕ್ ಗಳು, ಕಣ್ಣರಳಿಸುವ ಟ್ರಿಕ್ ಗಳು, ಚಪ್ಪಾಳೆ ಗಿಟ್ಟಿಸುತ್ತಿದ್ದವು. ಬಗೆ ಬಗೆ ಬಣ್ಣದ ಹೂಗಳು ಎಲ್ಲಿದ್ದವೋ ಏನೋ ಸಣ್ಣ ಕಡ್ಡಿಯಿಂದ ಚಂಗನೆ ಅರಳುವ ಹೂಗಳ ಮ್ಯಾಜಿಕ್, ಪ್ರತಿ ಬಾರಿ ಗಾಜಿನ ಲೋಟಕ್ಕೆ ಕರವಸ್ತ್ರ ಮುಚ್ಚಿ ತೆರೆದಾಗ ಬಣ್ಣ ಬದಲಾಯಿಸುತ್ತಿದ್ದ ನೀರಿನ ಮ್ಯಾಜಿಕ್, ಕೊಳವೆ ಒಳಗೇ ಕೈತೂರಿಸಿ ಅದರ ಮಧ್ಯೆ ಉರಿಯುವ ಮೇಣದ ಬತ್ತಿ ನುಸುಳಿ ಬಂದ ಮ್ಯಾಜಿಕ್,ಐದಾರು ಬ್ಲೇಡುಗಳನ್ನು ನುಂಗಿ ಅಗೆದು ನೀರು ಕುಡಿದು ನಂತರ ಅದನ್ನು ಒಂದೊಂದಾಗಿ ಹೊರಗೆ ಎಳೆದಾಗ ಮೈಜುಂ ಎನ್ನುವಂತೆ ಮಾಡಿದ ಮ್ಯಾಜಿಕ್, ಮಕ್ಕಳು ಮತ್ತು ಪ್ರೇಕ್ಷಕರ ತಲೆಗೂದಲು,ಕಿವಿ, ಮೂಗುಗಳಿಂದ ನಾಣ್ಯಗಳನ್ನು ಉದುರಿಸುವ ಮ್ಯಾಜಿಕ್, ಹತ್ತು ರೂಪಾಯಿಯನ್ನು ಐವತ್ತು ಡಾಲರ್ ಆಗಿ ಮಾಯೆ ಮಾಡಿದ ಮ್ಯಾಜಿಕ್ ಇನ್ನೂ ಅನೇಕ ಚಮತ್ಕಾರಗಳನ್ನು ಪ್ರದರ್ಶಿಸಿದರು ದರ್ಶನ್ ಮತ್ತು ಅವರ ತಂದೆ ಸತ್ಯಮೂರ್ತಿಯವರು.ನೋಡುತ್ತಾ ಒಂದುಘಾಮ್ಟ್ ಕಳೆದದ್ದೇ ತಿಳಿಯಲಿಲ್ಲ. ಕಾರ್ಯಕ್ರಮದ ನಂತರ ಶ್ರೀ ನಾರಾಯಣ ಅವರು ಮ್ಯಾಜಿಕ್ ಮಾಡಿದವರಿಗೂ ನೋಡಿ ಆನಂದಿಸಿದವರಿಗೂ ವಂದನೆ ಸಲ್ಲಿಸಿದರು. ರುಚಿಕರ ಪಾನಿಪೂರಿ ಜಯಸಿಂಹ ಅವರ ನೇತೃತ್ವದಲ್ಲಿ ಸಜ್ಜಾಗಿತ್ತು.ಒಟ್ಟಿನಲ್ಲಿ ಸಿಡ್ನಿಯಲ್ಲಿ ಒಂದು ಅಪರೂಪದ ಮ್ಯಾಜಿಕ್ ಷೋ ನೋಡುವ ಭಾಗ್ಯ ನಮ್ಮದಾಗಿತ್ತು. ▪

ಮನೆಯಲ್ಲಿ ಮಾಡಿ

ಮಜ್ಜಿಗೆಯೊಳಗಿನ ಬೆಣ್ಣೆಯಂತೆ ...

ಹೊರನಾಡ ಚೆಲುಮೆಯಲ್ಲಿ ಆಹಾರ ಆರೋಗ್ಯ ಅಂಕಣ ಬರೆಯುವ ಶ್ರೀಮತಿ ರಾಜೇಶ್ವರಿ ಜಯದೇವ್ ಅವರು ಆಯುರ್ವೇದೀಯ ರೀತಿಯಲ್ಲಿ ಬೆಣ್ಣೆ ಹೇಗೆ ತಯಾರಿಸುವುದು ಎಂದು ತಿಳಿಸಿಕೊಟ್ಟಿದ್ದರು. ಅದರಿಂದ ಪ್ರಭಾವಿತರಾದ ಓದುಗರೊಬ್ಬರು ಕಳಿಸಿರುವ ಚಿತ್ರ ಸಮೇತ ಬೆಣ್ಣೆ ತಯಾರಿಸುವ ವಿಧಾನ.

(ಇಲ್ಲಿ ವಿವರಿಸಿರುವ ರೀತಿಯಲ್ಲಿ ಕೆನೆಯನ್ನು ಕೊಂಡುತರಬೇಕೆಂದೇನೂ ಇಲ್ಲ. ಮನೆಯಲ್ಲಿ ಹಾಲು ಕಾಯಿಸಿದಾಗಲೆಲ್ಲ ಕೆನೆ ತೆಗೆದಿರಿಸಿಕೊಂಡು, ಅದಕ್ಕೆ ಹೆಪ್ಪು ಹಾಕಿ, ಸಾಕಷ್ಟು ಆದಮೇಲೆ ಅದನ್ನೇ ಕಡೆಯಬಹುದು.)

೧. ಅಂಗಡಿಯಿಂದ ತಂದ ಕೆನೆಯಾದರೆ, ಒಂದು ಹತ್ತು ನಿಮಿಷ ಸಣ್ಣ ಉರಿಯಲ್ಲಿ ಕಾಯಿಸಿ. ಸೀದುಹೋಗದಂತೆ ಸೌಟಿನಲ್ಲಿ ಆಡಿಸುತ್ತಿದ್ದರೆ ಉತ್ತಮ. ಮನೆಯಲ್ಲಿ ಕಾದಹಾಲಿಗೆ ಬಂದ ಕೆನೆಯಾದರೆ, ಮತ್ತೆ ಕಾಯಿಸುವ ಅಗತ್ಯವಿಲ್ಲ.

ಉಗುರುಬೆಚ್ಚಗಿರುವಾಗಲೇ ಕೆನೆಯಿರುವ ಪಾತ್ರೆಗೆ ಒಂದೆರಡು ಚಮಚದಷ್ಟು ಮೊಸರು ಹೆಪ್ಪು ಹಾಕುವಂತೆ ಮೊಸರನ್ನು ಹಾಕಿ ೧೦-೧೨ ಘಂಟೆಗಳ ಕಾಲ ಬೆಚ್ಚಗಿರುವ ಜಾಗದಲ್ಲಿ ಇರಿಸಿ.

(ಹೀಗೆ ಮಾಡುವುದರಿಂದ ಬೆಣ್ಣೆಯಲ್ಲಿ ಆರೋಗ್ಯಪೂರಕ ಜೀವಾಣುಗಳು (probiotics) ಸೇರಿಕೊಳ್ಳುತ್ತದೆ.)

೨. ಹೆಪ್ಪಾದ ನಂತರ ಚಿತ್ರದಲ್ಲಿ ತೋರಿಸಿರುವಂತಹ ಬ್ಲೇಡನ್ನು ಮಿಕ್ಸಿಯಲ್ಲಿ ಅಳವಡಿಸಿಕೊಳ್ಳಿ. ಮಿಕ್ಸಿಯ ಅರ್ಧದಷ್ಟಕ್ಕೆ ಮಾತ್ರ ಕೆನೆಯನ್ನು ಹಾಕಿ ಕಡೆಯಿರಿ. ಸುಮಾರು ಒಂದೆರಡು ನಿಮಿಷ ಕಡೆಯಬೇಕು.

೩. ಒಂದೆರಡು ನಿಮಿಷ ಕಡೆಯುವ ಹೊತ್ತಿಗೆ ಮಿಕ್ಸಿಯ ತಿರುಗುವ ಶಬ್ದ ಬದಲಾಗಿ ಗಟ್ಟಿ ಪದಾರ್ಥ ರುಬ್ಬುವ ಶಬ್ದ ಬರುವುದು. ಚಿತ್ರದಲ್ಲಿ ತೋರಿಸಿರುವಂತೆ ಕೆನೆಯು ಬಹಳ ಗಟ್ಟಿಯಾಗಿ (ಇಡ್ಲಿ/ದೋಸೆ ಹಿಟ್ಟಿನ ತರಹ) ಬೆಣ್ಣೆಯಂತೆಯೇ ಕಾಣುತ್ತದೆ.

ಈಗ ಒಂದರ್ಧ ಲೋಟ ತಣ್ಣೀರನ್ನು (ಹೆಚ್ಚು ತಣ್ಣಗಿದ್ದಷ್ಟು ಬೆಣ್ಣೆ ಬೇಗ ಬರುವುದು) ಹಾಕಿ ಮತ್ತೆ ಸುಮಾರು ೩೦ ಸೆಕೆಂಡ್ ಗಳ ಕಾಲ ಅಥವಾ ಹೆಚ್ಚೆಂದರೆ ಒಂದು ನಿಮಿಷ ಕಡೆಯಿರಿ.

ಮುಂದಿನ ಪುಟ ನೋಡಿ ...

೪. ಈಗ ಬೆಣ್ಣೆಯು ಚೆನ್ನಾಗಿ ಕಾಣುವಂತೆ ತೇಲುತ್ತಿರುತ್ತದೆ. ಈಗೇನಿದ್ದರೂ, ಬೆಣ್ಣೆ ತೆಗೆಯುವ ಕೆಲಸವಷ್ಟೇ. ಮುದ್ದೆ ಮುದ್ದೆಯಾಗಿ ಬೆಣ್ಣೆ ತೆಗೆದು, ತಣ್ಣನೆಯ ನೀರಿನಲ್ಲಿ ತೇಲಲು ಬಿಡಿ. ಉಳಿಯುವ ತಿಳಿಮಜ್ಜಿಗೆಯನ್ನು ಉಪಯೋಗಿಸಿ. (ಬಹಳ ರುಚಿಕರವಾಗಿರುತ್ತದೆ. ಮಸಾಲೆ ಮಜ್ಜಿಗೆ ಮಾಡಿದರೆ ಆಹಾ! ಸರ್ಗಸುಖವೇ ಸರಿ. ಬೇಕಿದ್ದರೆ ಮಜ್ಜಿಗೆಹುಳಿಗೂ ಉಪಯೋಗಿಸಬಹುದು.)

೫. ಬೆಣ್ಣೆಯನ್ನು ನೀರಿನಿಂದ ತೆಗೆದು ಒಂದು ಪಾತ್ರೆಗೆ ಹಾಕಿ ಕಾಯಿಸಿ. ಬರುವ ತುಪ್ಪಕ್ಕೆ ಒಂದು ಚಿಟಿಕೆ ಅರಿಶಿನ ಹಾಕಿ ಬಾಣಲಿನಲ್ಲಿ ಇಟ್ಟುಕೊಂಡರೆ, ಘಮಘಮಿಸುವ, ಆರೋಗ್ಯಪೂರ್ಣ ತುಪ್ಪವು ಸಿದ್ಧ.

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ



ಮುತ್ತಿರುವುದಿಂದು ಭೂಮಿಯನೊಂದು ದುರ್ದೈವ |
ಮೃತ್ಯು ಕುಣಿಯುತಲಿಹನು ಕೇಕೆಹಾಕುತಲಿ ||
ಸುತ್ತಿಪುದು ತಲೆಯನನುದಿನದ ಲೋಕದ ವಾರ್ತೆ |
ಎತ್ತಲಿದಕೆಲ್ಲ ಕಡೆ ಮಂಕುತಿಮ್ಮ ||

ಮುತ್ತಿರುವುದಿಂದು=ಮುತ್ತಿರುವುದು+ಇಂದು, ಭೂಮಿಯನೊಂದು = ಭೂಮಿಯನು + ಒಂದು, ಮೃತ್ಯುಕುಣಿಯುತಲಿಹನು = ಮೃತ್ಯು + ಕುಣಿಯುತಲಿ + ಇಹನು, ತಲೆಯನನುದಿನದ = ತಲೆಯನು + ಅನುದಿನದ, ಎತ್ತಲಿದಕೆಲ್ಲ = ಎತ್ತಲು + ಇದಕೆಲ್ಲ. ಸುತ್ತಿಪುದು = ಸುತ್ತಿಸುತ್ತದೆ, ಅನುದಿನವು = ಪ್ರತಿನಿತ್ಯವು, ಎತ್ತಲಿದಕೆಲ್ಲ = ಇದಕ್ಕೆಲ್ಲ ಎಲ್ಲಿ.

ಭೂಮಿಕೆ ಅದೇ. ಯುದ್ಧ. ಘೋರ ವಿಶ್ವಮಹಾಯುದ್ಧ. ಇಡೀ ವಿಶ್ವವೇ ಅಲುಗಾಡುವಂಥ ಯುದ್ಧ. ಎಲ್ಲೆಲ್ಲೂ ರಕ್ತಪಾತ. ಎಲ್ಲೆಲ್ಲೂ ಯುದ್ಧದ ಕೂಗು. ಅದು ಈ ಭೂಮಿಗೆ ಆವರಿಸಿಕೊಂಡ ದುರ್ದೈವವೆಂದು ವ್ಯಾಖ್ಯಾನಿಸುತ್ತಾರೆ ಮಾನ್ಯ ಗುಂಡಪ್ಪನವರು. ಎಲ್ಲೆಲ್ಲೂ ಮೃತ್ಯುವಿನ ತಾಂಡವ. ಯುದ್ಧದಲ್ಲಿ, ತಂದೆಯನ್ನೋ ಅಣ್ಣನನ್ನೋ, ಮಗನನ್ನೋ, ಮಿತ್ರನನ್ನೋ, ತಮ್ಮನನ್ನೋ, ಭೂಮಿಯನ್ನೋ, ಹುಟ್ಟಿದೂರಲ್ಲಿ ಬಿಟ್ಟ ಬೇರನ್ನೋ, ಆ ಊರಿನ ಮಣ್ಣಿನ ಋಣವನ್ನೋ, ಕಳೆದುಕೊಂಡವರೆ ಬಹಳ ಜನ. ಕಳೆದುಕೊಂಡವರೆಲ್ಲರಿಗೂ ನೋವು. ಕಳೆದುಕೊಳ್ಳದವರಿಗೂ ಕಳೆದುಕೊಂಡವರ ನೋವಿಗಾಗಿ ಸಂತಾಪ. ಒಟ್ಟಾರೆ ಇಡೀ ಭೂಮಿಗೆ ಸೂತಕದ ಭಾವ. ಎಲ್ಲ ಕಡೆಯಿಂದಲೂ ಸಾವಿನ ನಷ್ಟದ ಸಮಾಚಾರ. ಪ್ರತಿನಿತ್ಯ ಈ ಸಮಾಚಾರಗಳನೆಲ್ಲ ಕೇಳಿಕೇಳಿ, ಪತ್ರಿಕೆಗಳಲ್ಲಿ ಓದಿ ಓದಿ ತಲೆ ಸುತ್ತುವಂತಾಗುತ್ತದೆ. ಇದಕ್ಕೆಲ್ಲ ಎಂದಿಗಾದರೂ ಕೊನೆಯುಂಟೆ ಎಂದು ಲೋಕಶಾಂತಿಗಾಗಿ ಮರುಗುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆ ಯುದ್ಧದಲ್ಲಿ ಗೆಲುವು ಯಾರದಾಯಿತು ಎಂದು ಯೋಚಿಸಿದರೆ, ಗೆದ್ದದ್ದು "ಮೃತ್ಯು" ಮತ್ತೆಲ್ಲರೂ ಸೋತವರೇ!! ಆ ಯುದ್ಧದಲ್ಲೇ ಅಲ್ಲ ಯಾವುದೇ ಯುದ್ಧವನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದರೆ, ಗೆಲ್ಲುವುದು "ಮೃತ್ಯು" ಮಾತ್ರ. ಮಿಕ್ಕೆಲ್ಲರೂ, ಎಲ್ಲ ದೇಶಗಳೂ ಸೋಲುತ್ತವೆ. ಕೇವಲ ಮೃತ್ಯು ಗೆಲ್ಲುತ್ತದೆ. ಎರಡನೇ ಮಹಾಯುದ್ಧದ ಸಮಯದಲ್ಲಿ ಕ್ರೂರತ್ವಕ್ಕೆ ಒಂದು ಅಂತ್ಯವೇ ಇರಲಿಲ್ಲ. ಹಿಟ್ಲರನ ರಕ್ತದಾಹಕ್ಕೆ ಕೊನೆಯೇ ಇರಲಿಲ್ಲ. ಅದಕ್ಕೊಂದು ನಿದರ್ಶನವೆಂದರೆ "ಸಾಬಿಬಾರ್" ಎಂಬಲ್ಲಿ ವಿಷಾನಿಲ ಘಟಕಗಳನ್ನು ನಿರ್ಮಿಸಿ, ಶತ್ರುದೇಶದ ಸೈನಿಕರಷ್ಟೇ ಅಲ್ಲ ಸೆರೆಸಿಕ್ಕ ಸಾಮಾನ್ಯ ಪ್ರಜೆಗಳನ್ನೂ ಅಲ್ಲಿಗೆ ತಂದು, ಶಕ್ತಿ ಇರುವವರನ್ನು ಹಲವಾರು ಕೆಲಸಗಳಿಗೆ ಕೆಲಸಮಾಡಲು ಹಚ್ಚಿ, ಕೆಲಸ ಮಾಡಲಾಗದ ಸ್ತ್ರೀಯರು, ವೃದ್ಧರು, ಮಕ್ಕಳು ಹೀಗೆ ಎಲ್ಲರನ್ನೂ ಅಮಾನವೀಯ ಕ್ರೌರ್ಯದಿಂದ ಆ ವಿಷಾನಿಲ ಘಟಕದೊಳಕ್ಕೆ ತಳ್ಳಿ ಕೊಂದುಬಿಡುವ ಪರಮ ನೀಚತನವನ್ನು ಹಿಟ್ಲರ್ ತೋರಿಸಿದ್ದ. ಅದು ಕ್ರೌರ್ಯದ ಹಲವಾರು ಮಾರ್ಗಗಳಲ್ಲಿ ಒಂದಾಗಿತ್ತು. ಎಲ್ಲ ದೇಶಗಳೂ ಒಂದಲ್ಲ ಒಂದು ದೇಶದ ಪಕ್ಷವನ್ನು ತೆಗೆದುಕೊಂಡು ಇಡೀ ವಿಶ್ವವನ್ನೇ ವಿನಾಶದ ಅಂಚಿಗೆ ತಳ್ಳುವಂಥಾ ಯುದ್ಧವನ್ನು ನಡೆಸಿದರು. ಜಪಾನಿನ ಮೇಲೆ ಬಿದ್ದ ಎರಡು ಅಣುಬಾಂಬುಗಳು, ಈ ಯುದ್ಧವನ್ನು ಒಂದು ಕೊನೆಮುಟ್ಟಿಸಿತು. ಇದು ಚರಿತ್ರೆ.

ಆದರೆ ವರ್ತಮಾನವೇನೂ ಭಿನ್ನವಾಗಿಲ್ಲ. ಇನ್ನೂ ಭೀಕರವಾಗುತ್ತಿದೆ. ಆಗ ಒಂದು ಯುದ್ಧ ನಡೆದರೆ, ಈಗ ಹಲವಾರು ಯುದ್ಧಗಳು. ವೈಜ್ಞಾನಿಕವಾಗಿ, ಆರ್ಥಿಕವಾಗಿ ಮುಂದುವರೆದ ರಾಷ್ಟ್ರಗಳು ಹಿಂದಿರುವ ರಾಷ್ಟ್ರಗಳ ಮೇಲೆ ಆಧಿಪತ್ಯ, ದಬ್ಬಾಳಿಕೆ. ಷಡ್ಯಂತ್ರ, ಒತ್ತಡ, ಅನವಶ್ಯಕ ಹಸ್ತಕ್ಷೇಪದಿಂದ ಇಂದಿಗೂ ದೇಶದೇಶಗಳ ಮಧ್ಯೆ ದ್ವೇಷದ ಭಾವ ಒಂದಿಷ್ಟೂ ಕಡಿಮೆಯಾಗಿಲ್ಲ. ಜಾತಿ, ಮತ, ಭಾಷೆ, ಎಲ್ಲೆ, ಗಡಿ, ಹೀಗೆ ಹೊಡೆದಾಟಕ್ಕೆ ಹಲವಾರು ಕಾರಣಗಳು. ತನ್ನ ಬಲದ ಕಾರಣ ಪರದೇಶಗಳಿಗೆ ಕುಂಟು ನೆಪ ಒಡ್ಡಿ ನುಗ್ಗಿ ಮಾರಣಹೋಮ ನಡೆಸಿ ಅಲ್ಲಿರುವ ಸಂಪತ್ತನ್ನು ಲೂಟಿಮಾಡುವ ಪ್ರವೃತ್ತಿ ಸರಿಸುಮಾರು ಮೂರು ಸಾವಿರ ವರ್ಷಗಳ ಹಿಂದೆಯೂ ಇತ್ತು. ಇಂದೂ ಇದೆ. ಜನಾಂಗಗಳನ್ನು ಒಂದುಗೂಡಿಸುವುದಕ್ಕೆ ಪೂರಕವಾದ ಜಾತಿ, ಮತ, ಭಾಷೆಗಳೇ ಜನರ ಮಧ್ಯೆ, ದೇಶ-ದೇಶಗಳ ಮಧ್ಯೆ ವೈರಕ್ಕೆ ಕಾರಣವಾಗಿರುವುದು ಒಂದು ವಿಪರ್ಯಾಸ. ಅಷ್ಟೇ ಅಲ್ಲ, ಅಂದು ಇದ್ದ ಅಸ್ತ್ರ-ಶಸ್ತ್ರಾಸ್ತ್ರಗಳಿಗೆ ಹೋಲಿಸಿದರೆ ಇಂದು ಪ್ರಪಂಚದಲ್ಲಿ, ಇಂತಹ "ಹತ್ತು ಪ್ರಪಂಚ"ಗಳನ್ನು ನಿಮಿಷದಲ್ಲಿ ಧ್ವಂಸ ಮಾಡಬಲ್ಲ ಮಾರಕಾಸ್ತ್ರಗಳನ್ನು ಹೊಂದಿರುವ ಹಲವಾರು ದೇಶಗಳುಂಟು. ನಮ್ಮಲ್ಲಿ ಬತ್ತಿಯನ್ನು ಕಿತ್ತು ಸಿದ್ಧವಾಗಿರುವ ಅಸ್ತ್ರಗಳುಂಟು. ಬೆಂಕಿಕಡ್ಡಿ ಗೀರಬೇಕಷ್ಟೇ. ಸಮಗ್ರವಾಗಿ ಇದನ್ನೆಲ್ಲಾ ಸೇರಿಸಿ ದುರ್ದೈವ ಎಂದರು ಮಾನ್ಯ ಗುಂಡಪ್ಪನವರು. ಅಂದು ಗುಂಡಪ್ಪನವರು ಖೇದ ವ್ಯಕ್ತಪಡಿಸಿದ ಕಾರಣಗಳು ಇಂದಿಗೂ ಇವೆ. ಅಷ್ಟೇ ಅಲ್ಲ, ಇನ್ನೂ ವಿಕೃತ ರೂಪಪಡೆದುಕೊಂಡು ಇಡೀ ಪ್ರಪಂಚವನ್ನೇ ಎತ್ತ ಕೊಂಡುಹೋಗುತ್ತಿದೆಯೋ ಯಾರು ಬಲ್ಲರು. ಅಂದು ಅಷ್ಟಕ್ಕೇ ಮರುಗಿದ ಗುಂಡಪ್ಪನವರು ಇಂದು ಈಸ್ಥಿತಿಯನ್ನು ನೋಡಿದರೆ ಏನು ಹೇಳಬಹುದೆಂದು ಊಹಿಸಲೂ ಕಷ್ಟ. ಇಂತಹ ವಿಚಾರಗಳನ್ನು ಮಂಥನಮಾಡುತ್ತ, ಒಂದು ಶಾಂತ ಪ್ರಪಂಚವನ್ನು ನಿರ್ಮಿಸುವ ಪ್ರಯತ್ನವನ್ನು ಮಾಡೋಣ.▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಚಪಲದ ಶಾಮಯ್ಯನವರ ಸ್ವಸ್ಥ ಮನಸ್ ಅಭಿಯಾನ್

ಸಂಜೆಯ ವಾಕಿಂಗ್ ನೆಪ ಹೇಳಿ ಬಳುಕುವ ಬೆಡಗಿಯರ ಭಾವಭಂಗಿಗಳನ್ನು ಆಸ್ವಾದಿಸಲೆಂದು ಚಪಲದ ಶಾಮಯ್ಯನವರು ಪಾರ್ಕ್‌ಗೆ ತೆರಳಿ ಆಯಕಟ್ಟಿನ ಜಾಗದಲ್ಲಿ ಇರುವ ಕಲ್ಲುಬೆಂಚಿನ ಮೇಲೆ ಕುಳಿತರು. ಟಿಪ್‌ಟಾಪ್ ಹುಡುಗಿಯರನ್ನು ಟಾಪ್ ಟು ಬಾಟಮ್ ನೋಡುತ್ತಿರುವಾಗಲೇ ಪಕ್ಕದಿಂದ "ಹಲೋ ತಾತಾ..." ಎಂಬ ದನಿ ಕೇಳಬೇಕೆ! ಶುದ್ಧ ರಸಭಂಗ!

ಒಂದೇ ಸಮಾಧಾನ. ಪ್ರಶ್ನಿಸುತ್ತಿರುವ ಹುಡುಗಿಯೂ ಚೆಲುವೆಯೇ. ಮೂಲೆಮನೆಯ ಅಪಾರ್ಟ್‌ಮೆಂಟ್‌ನ ಬಾಲ್ಕನಿಯಲ್ಲಿ ಮೊಬೈಲ್ ಹಿಡಿದು ಮಾರ್ನಿಂಗ್ ಮಾರ್ನಿಂಗೂ ಚ್ಯಾಟುತ್ತಾ ನಿಲ್ಲುವ ಮಾನಿನಿ.

"ಸುಂದರ ಸಂಜೆ. ಸುಂದರ ಹುಡುಗಿ ನೀನು. ನನ್ನನ್ನು ತಾತ ಅನ್ನಬೇಡ, ಸಂಜೆಗೆ ಹೊಂದಿಕೆಯಾಗುವಂತೆ ಶ್ಯಾಮ್ ಅನ್ನು ಕಿಶೋರಿ, ಪೋರಿ" ಎನ್ನಬೇಕೆಂದು ಬಾಯ್ತೆರೆದರು.

ಒಂದೇ ರಸ್ತೆ. ನಾಲ್ಕೇ ಮನೆ ದೂರದ ಹುಡುಗಿ. ಪೋರಿ ಮನೆಗೆ ದೂರು ತಂದರೆ ಸಿದ್ಧವಾದೀತು ತನ್ನ ಗೋರಿ ಎಂಬ ಎಚ್ಚರ ಮನದಲ್ಲಿ ಮೂಡಿತು.

"ಏನು ತಾತ ಸಮಾಚಾರ?" ಮತ್ತೆ ನುಡಿದಳು ಬೆಡಗಿ.

"ಏನು ಹೇಳಲಮ್ಮಾ... ಊರು ತುಂಬಾ ಅನಾಚಾರ, ಟಿವಿ ತುಂಬಾ ಪ್ರಸಾರ, ಇದನ್ನ ನೋಡೋದು ನಮ್ಮ ಗ್ರಾಚಾರ"

"ಯಾಕೆ ತಾತ?" ಆ ತರಹದ್ದು ಏನಿರತ್ತೆ?"

"ಏನೂ ಇರಬೇಕಿಲ್ಲಮ್ಮ; ವಿರಾಟ್ ಕೊಹ್ಲಿ ಅನುಷ್ಕಾನ ಮದುವೆ ಆಗ್ತೀನಿ ಅಂತಾನೆ. ತಕ್ಷಣ ಅದೊಂದು ಬ್ರೇಕಿಂಗ್ ನ್ಯೂಸ್ ಅಂತಾರೆ. ಸರೀನಾ?""

"ತಪ್ಪೇನಿದೆ?"

"ಮದುವೆ ಆಗೋದು ಬ್ರೇಕಿಂಗ್ ನ್ಯೂಸ್ ಅಲ್ಲ, ಮೇಕಿಂಗ್ ನ್ಯೂಸು; ಡೈವೋರ್ಸ್ ಆಗೋದು ಬ್ರೇಕಿಂಗು"

"ಹೌದಲ್ವಾ... ಗ್ರೇಟ್ ತಾತ. ಮದುವೆ ಅನ್ನೋದು ಏಳೇಳು ಜನ್ಮದ ಅನುಬಂಧ ಅಂತಾರಲ್ಲಾ, ವಿಚ್ಛೇದನ?""

"ಅದೂ ಏಳೇಳು ಜನ್ಮದ್ದೇ"

"ಹೇಗೆ?"

"ಏಳು ಎದ್ದೇಳು ಅಂತ ಜನ್ಮ ಜಾಲಾಡಿ ಹೊರಹಾಕ್ತಾರಲ್ಲ!"

"ನನ್ನದೊಂದು ಐಡಿಯಾ ಇದೆ"

"ಏನು?"

"ಗಂಡು ಹೆಣ್ಣಿನ ಜಾತಕ ನೋಡಿ ವಿವಾಹ ನಿಗದಿ ಮಾಡುವುದಕ್ಕಿಂತ ಅತ್ತೆ ಸೊಸೆಯರ ಜಾತಕ ನೋಡಿ ನಿಗದಿಪಡಿಸಿದರೆ ಒಳ್ಳೆಯದಲ್ಲವೆ?"

"ಅಕಟಕಟಾ! ಅತ್ತೆ-ಸೊಸೆ ಒಂದಾಗಿಬಿಟ್ಟರೆ ಅವರಿಬ್ಬರೂ ಶಾಪಿಂಗ್‌ಗೆ ಔಟ್, ಮಾವ-ಮಗನಿಗೆ ಸೌಟ್! ಸುಮ್ಮನಿರು; ಇವೆಲ್ಲ ಹೊರಗೆ ಹೇಳಬೇಡ" ಕಂಪಿಸಿ ನುಡಿದರು ಶ್ಯಾಮ್. ವಿಷಯ ಬದಲಾಯಿಸಿದಳು ಬೆಡಗಿ.

"ಹೆಂಗಸರ ಜೊತೆ ಗಂಡಸರು ಶಾಪಿಂಗ್ ಹೋಗ್ತಾರಲ್ಲ, ಅವರಿಗೆ ಬೇಜಾರಾಗಲ್ವ?"

"ಊಹೂಂ"

"ಯಾಕೆ?"

"ಶಾಪಿಂಗ್‌ಗೆ ಬರೋ ಬೇರೆ ಹೆಂಗಸರನ್ನ ನೋಡ್ತಾ ಕೂತ್ಬಿಟ್ರೆ ಟೈಮ್ ಹೋಗೋದೆ ಗೊತ್ತಾಗಲ್ಲ...." ತಾತನ ಕಣ್ಣಳಲ್ಲಿ ರಂಗುರಂಗಿನ ಕನಸು!

"ರಸಿಕ ತಾತ! ಹೌದೂ... ಹೆಣ್ಣನ್ನು ತವರುಮನೆಯ ಸಸಿ, ಗಂಡನ ಮನೆಯ ಮರ ಅಂತಾರಲ್ಲ, ಯಾಕೆ?"

"ಅಲ್ಲಿ ಅಷ್ಟೇ ಸಣ್ಣ ಇದ್ದು, ಇಲ್ಲಿ ಆ ಪಾಟಿ ಗಾತ್ರ ಆಗುವುದರಿಂದ."

"ನಿಮ್ಮ ಹೆಂಡತಿಯ ಮುಂದೆಯೂ ಇದನ್ನೇ ಹೇಳ್ತೀರಾ?"

"ನನ್ನ ಹಲ್ಲು ಇದ್ದಾಗ ಹೇಳಕ್ಕೆ ಭಯ ಆಗ್ತಿತ್ತು. ಈಗ ಉದುರಿಸಕ್ಕೆ ಏನೇನೂ ಇಲ್ಲವಾದ್ದರಿಂದ ಹೇಳಬಹುದು"

"ತಾತ, ನಾನು ಪ್ರತಿ ಮಾರ್ನಿಂಗ್ ಬಾಲ್ಕನಿಗೆ ಬಂದಾಗ ನೀವು ನಿಂತಲ್ಲಿಂದಲೇ ಹೋಗಿಬರುವ ಹುಡುಗಿಯರನ್ನ ಕದ್ದು ನೋಡೋದನ್ನ ನೋಡಿದೀನಿ. ನಿಮ್ಮ ವೈಫ್ ಮಾತ್ರ ಕಾಣಲ್ವಲ್ಲ?"

"ನೋಡಿಲ್ವೇ ನೀನು? ಹೀಗಿದಾಳೆ ನೋಡು"

ಮುಂದಿನ ಪುಟ ನೋಡಿ ...

ಶಾಮಯ್ಯನವರು ತಮ್ಮ ಪರ್ಸಿನಿಂದ ಫೋಟೋವೊಂದನ್ನು ತೆಗೆದು ತೋರಿಸಿದರು.

“ಹೆಂಡತಿಯ ಫೋಟೋನ ಗಂಡ ಪರ್ಸ್‌ನಲ್ಲಿ ಇಟ್ಕೊಂಡಿರ್ತಾನಲ್ಲ, ಯಾಕೆ?” ಮತ್ತೆ ಶುರುವಾಯಿತು ಪ್ರಶ್ನೆಗಳು.

“ಪರ್ಸ್ ಖಾಲಿ ಇರೋದಕ್ಕೆ ಕಾರಣ ಕೇಳಿದರೆ ಇವಳೇ ಅಂತ ತೋರಿಸಕ್ಕೆ.”

“ಅಜ್ಜೀನೂ ನಿಮ್ಮನ್ನ ಕಾಸು ಕೇಳ್ತಾರಾ?”

“ದಿನಾ ಐನೂರು ರೂಪಾಯಿ ಕೇಳ್ತಾಳೆ”

“ಯಾಕಂತೆ?”

“ಯಾರಿಗ್ಗೊತ್ತು! ಒಂದು ದಿನ ಕೊಟ್ಟುನೋಡ್ಬೇಕು”

“ಮದುವೆಗೆ ಮುಂಚೆ ನೀವು ಏನು ಮಾಡ್ಕೊಂಡಿದ್ರಿ ತಾತ?” ಪೋರಿಗೆ ಅದೇನೋ ಕುತೂಹಲ

“ಹೆಡ್ ಕ್ಲರ್ಕ್ ಆಗಿದ್ದೆ.”

“ಮದುವೆ ಆದಮೇಲೆ?”

“ಹೆಡ್ ಕುಕ್ಕು. ಅಡಿಗೆ ಮಾಡೋದನ್ನ ನನ್ನ ಮಾವನವರಿಂದ ಶಿರಸಾವಹಿಸಿ ಕಲಿತೆ. ಈಗ ನನ್ನ ಮಗನೂ ಒಳ್ಳೆಯ ಕುಕ್ಕು!”

“ಮೊಮ್ಮಗ?”

“ನಮ್ಮಲ್ಲಿ ಅಡಿಗೆ, ಹೆಣ್ಣಿನ ಮಾತು ಕೇಳುವುದು ಹೆರಿಡಿಟರಿ ಕಣಮ್ಮ”

“ಸೋ ನೈಸ್. ಐ ಆಮ್ ಸೋ ಹ್ಯಾಪಿ. ಮದುವೆ ಆದಾಗ ಅಜ್ಜಿ ಹೇಗಿದ್ರು?”

“ಮದುವೆಗೆ ಮುಂಚೆ ತುಟಿಯಲ್ಲಿ ಇದ್ದಂಥ ಹಲ್ಲೊಂದೆ ಒಂದು; ತುಟಿಯಾಚೆ ಬಂದಿತ್ತು ಮೂವತ್ತ ಒಂದು”

“ಮದುವೆ ಆದಮೇಲೆ?”

“ಅವಳನ್ನ ನೋಡಿದರೆ ಹಾರ್ಡ್‌ವೇರ್ ಸ್ಟೋರ್ ನೋಡಿದಹಾಗೆ ಆಗೋದು”

“ಯಾಕೆ?”

“ಬಾಯಲ್ಲಿ ಕಬ್ಬಿಣ, ಸಿಮೆಂಟು; ಕಣ್ಣಿಗೆ ಗಾಜು; ತಲೆ ಕೂದಲು ಬೈಂಡಿಂಗ್ ವೈರ್ನಷ್ಟು ಬಿರುಸು!”

“ನಿಮ್ಮ ಫೇವರಿಟ್ ಹೀರೋಯಿನ್ ಯಾರು?”

“ನೀನೇ” ಎನ್ನಬೇಕೆನ್ನುವಷ್ಟರಲ್ಲಿ ‘ಪೋರಿ ದೂರಿದರೆ ಗೋರಿ’ ನೆನಪಾಗಿ,

“ಡ್ರೀಮ್ ಗರ್ಲ್ ಹೇಮಮಾಲಿನಿ. ಸೀತಾ ಔರ್ ಗೀತಾ ನೋಡಿದ ದಿನದಿಂದ ‘ನಿನದೇ ನೆನಪು ದಿನವೂ ಮನದಲ್ಲಿ’ ಅಂತ ಹಾಡ್ತಿದ್ದೆ. ಈಗಲೂ ನನ್ನ ಕನಸಲ್ಲಿ ಹೇಮಮಾಲಿನಿ ಬರ್ತಾಳೆ. ಆದರೆ ಈಗಿನ ಉದ್ದೇಶವೇ ಬೇರೆ”

“ಏನು?”

“ಇನ್ನಾದರೂ ಕೊಳಕು ನೀರನ್ನು ಕುಡಿಯುವುದನ್ನು ಬಿಟ್ಟು ಶುದ್ಧ ಪಾನಿ ಕುಡಿಯಿರಿ ಅನ್ನಕ್ಕೆ ಬರ್ತಾಳೆ. ಬರೀ ನನ್ನದೇ ಆಯ್ತು. ಏನಾದರೂ ಜನರಲ್ ಆಗಿ ಮಾತಾಡೋಣವೇನು?”

“ಓಕೆ ತಾತ. ಸ್ವಚ್ಛಭಾರತ್ ಅಭಿಯಾನ್ ಬಗ್ಗೆ ಏನು ಹೇಳ್ತೀರ?”

“ಒಳ್ಳೇದೇ ಕಣಮ್ಮ. ನಮ್ಮ ಮಲ್ಯ ಎಷ್ಟು ಚೆನ್ನಾಗಿ ಸ್ವಚ್ಛ ಮಾಡಿದರು ನೋಡು”

“ಮಲ್ಯಾನಾ?”

“ಹೂ ಕಣಮ್ಮ; ಇಡೀ ತಿಜೋರಿ ತಿಜೋರೀನೇ ಒಂದು ಕಡೆಯಿಂದ ಕ್ಲೀನ್ ಮಾಡಿದರು.”

“ನಿಮಗೆ ಹೇಗೆ ಗೊತ್ತು?”

“ಪೇಪರ್ನಲ್ಲಿ ಬಂದಿತ್ತಲ್ಲ...”

“ಎಲ್ಲಾ ಪತ್ರಿಕೆಗಳೂ ಸತ್ಯವನ್ನೇ ಹೇಳುತ್ತವೆಯೇ?”

“ಹಾಗೆಲ್ಲ ಹೇಳಕ್ಕಾಗಲ್ಲ. ಆದರೆ ಯಾವಾಗಲೂ ಸತ್ಯವನ್ನು ಹೇಳುವುದು ಕೇವಲ ವೈಕುಂಠ ಸಮಾರಾಧನೆ, ಶಿವಗಣಾರಾಧನೆ ಪತ್ರಿಕೆಗಳು ಮಾತ್ರ.”

“ನೀವು ಬ್ರಿಟಿಷರನ್ನ ಕಂಡಿದ್ದವರು; ಆಗಿನ ಬ್ರಿಟಿಷರ ಕಾಲಕ್ಕೂ ನಮ್ಮ ಕಾಲಕ್ಕೂ ಏನು ವ್ಯತ್ಯಾಸ?”

“ಅವರು ಲೂಟಿ ಹೊಡೆದದ್ದು ಇಂಗ್ಲೆಂಡಿಗೆ ಇವರು ಲೂಟಿ ಹೊಡೆದದ್ದು ಸ್ವಿಟ್ಜರ್ಲೆಂಡಿಗೆ?”

“ಈ ಸ್ವಿಸ್ ಹಣ ಭಾರತಕ್ಕೆ ಯಾವಾಗ ವಾಪಸ್ ಬರತ್ತೆ?”

ಮುಂದಿನ ಪುಟ ನೋಡಿ ...

“ಇಲ್ಲೇ ಸ್ವಿಸ್ ಬ್ಯಾಂಕ್ ತನ್ನ ಬ್ರ್ಯಾಂಚ್‌ಗಳನ್ನ ಓಪನ್ ಮಾಡಿದಾಗ.”

“ತಾತ, ಲವ್ ಬಗ್ಗೆ ಒಂಚೂರು ಮಾತಾಡೋಣ್ವ?”

ಮತ್ತೆ ಏನೇನೋ ರಂಗಿನ ಕನಸುಗಳು ತಾತನ ಮನದಲ್ಲಿ. “ಬೈ ಆಲ್ ಮೀನ್ಸ್” ಉತ್ಸಾಹದಿಂದ ನುಡಿದರು ತಾತ.

“ನಿಮ್ಮಂತಹ ಓಲ್ಡೀಸ್ ಚಿಕ್ಕವರಂತೆ ಕಾಣಲು ಹೇರ್ ಡೈ ಹಚ್ಚುತ್ತೀರಿ. ಪ್ರಾಯದ ಹುಡುಗರು ಏನು ಹಚ್ಚಬೇಕು?”

“ನಿನ್ನಂತಹ ಪ್ರಾಯದ ಹುಡುಗಿಯರಿಗೆ ಫೋನ್ ಹಚ್ಚಬೇಕು.”

“ಪ್ರೇಮ ಕುರುಡು ಎನ್ನುತ್ತಾರೆ. ನಿಜಾನಾ?”

“ಹಂಡ್ರೆಡ್ ಪರ್ಸೆಂಟ್ ನಿಜ. ಅದಕ್ಕೇ ಒಬ್ಬರನ್ನೊಬ್ಬರು ಹಿಡ್ಕೊಂಡೇ ನಡೆಯುವುದು.”

“ನನ್ನ ಕಂಡರೆ ನಿಮಗೆ ಏನನ್ನಸ್ತೆ?”

“ನನ್ನ ಮೊಮ್ಮಗನ ವಯಸ್ಸಿನಲ್ಲಿ ನೀನು ಸಿಕ್ಕಿದ್ದಿದ್ದರೆ ಖಂಡಿತ ಹಾರಿಸ್ಕೊಂಡು ಹೋಗಿ ಮದುವೆ ಆಗುತ್ತಿದ್ದೆ” ಥಟ್ಟನೆ ನುಡಿದರು ತಾತ.

“ಥ್ಯಾಂಕ್ಸ್ ತಾತ; ಅಂತೂ ನಿಮ್ಮ ಫ್ಯಾಮಿಲಿಯ ಬ್ರೀಫ್ ಹಿಸ್ಟರಿ ಸಿಕ್ಕಂತಾಯಿತು. ನಾನು ಪ್ರತಿ ಮಾರ್ನಿಂಗ್ ಮಾತನಾಡುತ್ತಿದ್ದದ್ದೇ ನಿಮ್ಮ ಮನೆಯಲ್ಲೇ ಉಳಿದುಕೊಂಡಿರುವ ನಿಮ್ಮ ಮೊಮ್ಮಗನ ಹತ್ತಿರ. ವಾಟ್ ಎ ಫ್ಯಾಮಿಲಿ. ನಿಮ್ಮ ಮಗ ಮದುವೆಯಾದದ್ದೂ ಓಡಿಹೋಗಿಯೇ; ನಿಮ್ಮ ಮೊಮ್ಮಗನೂ ನನ್ನನ್ನು ಮೊನ್ನೆ ಹಾರಿಸಿಕೊಂಡುಹೋಗಿ ಮದುವೆಯಾದ. ಇವತ್ತು ನಿಮ್ಮ ಮನೆ ತುಂಬಕ್ಕೆ ಬರ್ತಿದೀನಿ. ಆಶೀರ್ವಾದ ಮಾಡಿ” ಕಾಲಿಗೆರಗಿದಳು ಬೆಡಗಿ.

ಶಾಮಯ್ಯನವರ ಮನದಲ್ಲಿ ಕೊಚ್ಚೆ ರಸಿಕತೆ ಅಭಿಯಾನ್ ಸತ್ತು ಸ್ವಸ್ಥ ಮನ್ ಅಭಿಯಾನ್ ಆರಂಭಕ್ಕೆ ಕಾಲ ಒದಗಿತ್ತು. ▪

ಕರ್ನಾಟಕದ ಪ್ರಮುಖ ಬೆಳೆಗಳು / ಬೆಳೆಯುವ ಸ್ಥಳ

ಕನ್ನಡ ಮತ್ತು ಕರ್ನಾಟಕದ ವಿಶೇಷಗಳು

ಭತ್ತ	ರಾಯಚೂರು,ಬಳ್ಳಾರಿ,ಚಿತ್ರದುರ್ಗ,ಮಂಡ್ಯ, ಮೈಸೂರು, ಹಾಸನ, ಶಿವಮೊಗ್ಗ ಚಿಕ್ಕಮಗಳೂರು,ಕೊಡಗು,ಧಾರವಾಡ,ಉಡುಪಿ, ದ.ಕನ್ನಡ,ಉ.ಕನ್ನಡ, ಬೆಳಗಾವಿ
ರಾಗಿ	ಮಂಡ್ಯ, ಮೈಸೂರು,ಹಾಸನ ಕೋಲಾರ,ತುಮಕೂರು,ದಾವಣಗೆರೆ, ಚಿತ್ರದುರ್ಗ,ಚಾಮರಾಜನಗರ, ರಾಮನಗರ, ಚಿಕ್ಕಬಳ್ಳಾಪುರ
ಜೋಳ	ರಾಯಚೂರು,ಬಳ್ಳಾರಿ,ಚಿತ್ರದುರ್ಗ,ಧಾರವಾಡ, ಗುಲ್ಬರ್ಗ,ಬೀದರ್,ಬಿಜಾಪುರ
ಗೋಧಿ	ಧಾರವಾಡ, ಗುಲ್ಬರ್ಗ,ಬೀದರ್,ಬಿಜಾಪುರ, ರಾಯಚೂರು, ಬೆಳಗಾವಿ
ಕಬ್ಬು	ಮೈಸೂರು, ಮಂಡ್ಯ, ಬಿಜಾಪುರ,ಬೆಳಗಾವಿ
ಹತ್ತಿ	ಮೈಸೂರು,ಚಾಮರಾಜನಗರ,ಶಿವಮೊಗ್ಗ, ದಾವಣಗೆರೆ, ಧಾರವಾಡ, ಬಿಜಾಪುರ, ರಾಯಚೂರು, ಬೆಳಗಾವಿ,ಚಿತ್ರದುರ್ಗ
ತಂಬಾಕು	ಮೈಸೂರು, ಮಂಡ್ಯ, ರಾಯಚೂರು, ಧಾರವಾಡ, ರಾಯಚೂರು, ಬೆಳಗಾವಿ,ಬಳ್ಳಾರಿ,ಚಿತ್ರದುರ್ಗ,ಹಾಸನ, ಕೋಲಾರ ತುಮಕೂರು,ಚಿಕ್ಕಮಗಳೂರು
ಕಾಫಿ	ಚಿಕ್ಕಮಗಳೂರು,ಕೊಡಗು, ಹಾಸನ, ಶಿವಮೊಗ್ಗ,ಮೈಸೂರು,ದ.ಕನ್ನಡ
ಟೀ ,ರಬ್ಬರ್	ಚಿಕ್ಕಮಗಳೂರು,ಕೊಡಗು, ಹಾಸನ,
ಅಡಿಕೆ	ಹಾಸನ, ಶಿವಮೊಗ್ಗ, ಮೈಸೂರು, ದ.ಕನ್ನಡ, ಉ.ಕನ್ನಡ
ತೆಂಗು	ತುಮಕೂರು,ಹಾಸನ,ಮಂಡ್ಯ,ಮೈಸೂರು, ಉಡುಪಿ, ದ.ಕನ್ನಡ

ನಿಜವಾದ ವರ

ಕನಕಾಪುರ ನಾರಾಯಣ

ಸೂರಜ ಮತ್ತು ಧೀರಜ ಎಂಬ ಸ್ನೇಹಿತರು ವ್ಯಾಪಾರಿಗಳಾಗಿದ್ದರು.ಇಬ್ಬರೂ ಸುಂದರ ಹಾಗೂ ಬಲಶಾಲಿಗಳಾಗಿದ್ದರು. ಪಕ್ಕದ ಊರಿನ ಮತ್ತೊಬ್ಬ ವ್ಯಾಪಾರಿಯ ಮಗಳಾದ ವೇದಾವತಿಗೆ ಧೀರಜನ ಮೇಲೆ ಮೋಹವಾಗಿ ಆತನನ್ನು ಕರೆಸಿ ಒಪ್ಪಿಗೆ ಪಡೆದು ಮದುವೆಯಾದಳು. ಆಕೆ ಅಪಾರ ದೇವೀ ಭಕ್ತಳು. ಬಹಳ ವರ್ಷದ ತನ್ನ ವ್ರತದ ಫಲ ತನ್ನ ಬಯಕೆಯಂತೆ ಒಬ್ಬ ಒಳ್ಳೆಯ ಗಂಡನನ್ನು ಪಡೆಯುವ ಆಸೆ ಫಲಿಸಿತ್ತು. ವಿವಾಹದ ನಂತರ ಎಲ್ಲರೂ ಕಾಡುದಾರಿ ಸಾಗುತ್ತಾ ಧೀರಜನ ಊರಿಗೆ ಸಾಗಿದ್ದರು. ನಡೆವೆ ದರೋಡೆಗಾರರು ಹಾವಳಿ ಮಾಡಿ ಚಿನ್ನಾಭರಣ ಕಸಿದುಕೊಂಡು ಹೊಡೆದಾಡುವಾಗ ಇಬ್ಬರೂ ತರುಣರ ಶಿರ ಉರುಳಿತ್ತು.

ದುಃಖಿತಳಾದ ವೇದಾವತಿ ದಾರಿಕಾಣದೆ ಕಂಗಾಲಾದಳು ಬಳಿಯಲ್ಲೇ ಇದ್ದ ದೇವಿಯ ಮುಂದೆ ಕುಳಿತು ತಪಗೈದಳು. ದೇವಿ ಆಕೆಯ ಭಕ್ತಿಗೆ ಮೆಚ್ಚಿ ವರ ಕೇಳಲು ಹೇಳಿದಳು. ವೇದಾವತಿ ತನ್ನ ಪತಿ ಮತ್ತು ಅವನ ಸ್ನೇಹಿತನ ಪ್ರಾಣ ಭಿಕ್ಷೆ ಬೇಡಿದಳು. ದೇವಿ "ತಥಾಸ್ತು, ಅವರ ತಲೆಗಳನ್ನು ಅವರವರ ದೇಹಕ್ಕೆ ಅಂಟಿಸಿಬಿಡು ಕೂಡಲೇ ಜೀವ ಬರುತ್ತದೆ,ಅದಲು ಬದಲಾದರೆ ಸರಿಪಡಿಸಲು ಸಾಧ್ಯವಿಲ್ಲ " ಎಂದು ಹೇಳಿ ಮಿಂಚಿನಂತೆ ಕಣ್ಮರೆಯಾದಳು. ಆದರೆ ವೇದಾವತಿ ಆತಂಕದಲ್ಲಿ ಸೂರಾಜನ ತಲೆಯನ್ನು ಧೀರಜನ ದೇಹಕ್ಕೂ ಧೀರಜನ ತಲೆ ಸೂರಜನ ದೇಹಕ್ಕೂ ಅಂಟಿಸಿ ಬಿಟ್ಟಳು. ಅವರು ಎದ್ದು ಆಕೆಯು ಮಾಡಿದ ತಪ್ಪಿನ ಅರಿವಾಗಿ ಪೇಚಾಡತೊಡಗಿದರು..... ಎಂದು ಹೇಳಿ ಕಥೆ ಅಲ್ಲಿಗೇ ನಿಲ್ಲಿಸಿತು ಬೇತಾಳ.....

ಬೇತಾಳದ ಪ್ರಶ್ನೆ ಹೀಗಿತ್ತು: "ವೇದಾವತಿ ಈಗ ಯಾರನ್ನು ತನ್ನ ಪತಿ ಎಂದು ಸ್ವೀಕರಿಸಬೇಕು? ಎಂದು

ಅದಕ್ಕೆ ವಿಕ್ರಮನ ಉತ್ತರ ಹೀಗಿತ್ತು : " ದೇಹದ ಮುಖ್ಯ ಅಂಗ ಶಿರ, ತಲೆಯಲ್ಲಿನ ಮಿದುಳಿನ ಆಜ್ಞೆಯಂತೆಯೇ ಮಿಕ್ಕೆಲ್ಲಾ ಅಂಗಗಳು ಕೆಲಸ ಮಾಡುವುದು. ಆದ್ದರಿಂದ ಧೀರಜನ ತಲೆ ಹೊಂದಿರುವ ದೇಹವೇ ಆಕೆಯ ಪತಿ " ಎಂದು.

ಆ ಉತ್ತರ ಮೆಚ್ಚಿದ ಬೇತಾಳ ಬೇತಾಳ ವಿಕ್ರಮನ ಬೆನ್ನು ಬಿಟ್ಟು ಹಾರಿ ಹೋಯಿತು. ▪

ರೆಸಿಪಿ ಕೊಡ್ತೀರಾ!

ಕ್ಯಾರೆಟ್ ಚಟ್ನಿ

ಬೇಕಾಗುವ ಸಾಮಗ್ರಿಗಳು

- ಕ್ಯಾರೆಟ್ ಅರ್ಧ ಕಿಲೋ
- ಅರ್ಧ ತೆಂಗಿನ ಕಾಯಿ ತುರಿದದ್ದು
- ಹಸಿ ಮೆಣಸಿನಕಾಯಿ ಹತ್ತು
- ಉಪ್ಪು ಒಂದು ಟೀ ಚಮಚ
- ಹುಣಸೇ ಹಣ್ಣು ನಿಂಬೆ ಗಾತ್ರ
- ಕೊತ್ತಂಬರಿ ಸೊಪ್ಪು ಒಂದು ಕಟ್ಟು
- ವಗ್ಗರಣೆಗೆ ಸ್ವಲ್ಪ ಎಣ್ಣೆ ಕರಿಬೇವು, ಸಾಸಿವೆ, ಇಂಗು, ಉದ್ದಿನಬೇಳೆ

ಮಾಡುವ ವಿಧಾನ

- ಕ್ಯಾರೆಟ್ ತೊಳೆದು ತುರಿದಿಟ್ಟುಕೊಳ್ಳಿ
- ತುರಿದ ಕ್ಯಾರೆಟ್,ಹುಣಸೇಹಣ್ಣು ಹಾಗೂ ಮಿಕ್ಕಎಲ್ಲಾ ಸಾಮಾನಿನ ಜೊತೆ ಸೇರಿಸಿ ಅರ್ಧಲೋಟ ನೀರು ಬೆರೆಸಿ ರುಬ್ಬಿಕೊಳ್ಳಿ
- ರುಬ್ಬಿದ ಮಿಶ್ರಣಕ್ಕೆ ವಗ್ಗರಣೆ ಹಾಕಿ, (ಚಪಾತಿ ದೋಸೆ ಜೊತೆ ತಿನ್ನಲು ರುಚಿ)

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ಒಗಟು

೧. ಚಂದ್ರನಂತೆ ಗುಂಡಾಗಿ ಎಲೆಗಿಂತಲೂ ತೆಳುವಾಗಿ, ತಿಂದರೆ ಬಲು ರುಚಿ

೨. ನಾಲಿಗೆಯುಂಟು , ಮಾತಾಡುವುದಿಲ್ಲ ! ಮುಳ್ಳುಂಟು , ಪೊದೆಯಲ್ಲ

ಉತ್ತರಕ್ಕೆ ಪುಟ ೧೬ ನೋಡಿ

ಹೆಣ್ಣು ...

ಹೆಣ್ಣು ಮರದ ಕೊಂಬೆಯಲ್ಲ
ಘಮದ ಗಂಧ ಚಂದನ
ಹೆಣ್ಣು ಬರಿಯ ದೇಹವಲ್ಲ
ಹಲವು ಭಾವ ಸ್ಪಂದನ

ಹೆಣ್ಣು ಉರಿವ ಬೆಂಕಿಯಲ್ಲ
ಬೆಳಕನೀವ ಹಣತೆ
ಹೆಣ್ಣು ಪುಟ್ಟ ಗಿರಿಯು ಅಲ್ಲ
ಹಿಮಗಿರಿಗಳ ಘನತೆ

ಹೆಣ್ಣು ಬೇಲಿ ಹೂವು ಅಲ್ಲ
ಜಲದಲಿರುವ ಕಮಲೆ
ಹೆಣ್ಣು ಕೇಲಿ ಹೆಣ್ಣು ಅಲ್ಲ
ವಿಶೇಷವಿರುವ ವಿಮಲೆ

ಹೆಣ್ಣು ಸರಿವ ಗಾಳಿಯಲ್ಲ
ಕಂಪ ಹೊತ್ತ ಪವನ
ಹೆಣ್ಣು ಬರಿಯ ಸಾಲು ಅಲ್ಲ
ನನ್ನ ಎದೆಯ ಕವನ

ಹೆಣ್ಣು ನೆಲದ ಹಾಸು ಅಲ್ಲ
ಮೀರಿನಿಂತ ವನಿತೆ
ಗಂಡಿನೆದೆಯ ತಟ್ಟುತಿರುವ
ಪ್ರೇಮಭರಿತ ಕವಿತೆ

-ಮಾಲು, ಅಡಿಲೈಡ್

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"


ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಶಕುಂತಲೆಯ ದುರದೃಷ್ಟ, ಈ ಮುನಿ ಆಗಮಿಸಿದ ಸಮಯ ಸರಿ ಇರಲಿಲ್ಲ.

೨. ಕೃತಕತೆಯೇನಿಲ್ಲ, ಸರ್ವಾಭರಣ ಭೂಷಿತಳಾಗಿ ಸಿಂಗರಿಸಿಕೊಂಡವಳು.

೩. ಸರ್ಪವಲ್ಲ, ಕಾಲಿಗೆ ಮೆಟ್ಟುವುದು.

೪. ಪ್ರಭಾವಶಾಲೀ ವ್ಯಕ್ತಿಗಳ ಅನುಸರಿಸುತ್ತಿರುವವ ಚಿಕ್ಕ ಹುಡುಗನೇ ಆಗಬೇಕೆಂದಿಲ್ಲ.

೫.ವೃಕ್ಷಗಳನ್ನು ಮಂಗನಂತೆ ಹತ್ತಿಳಿದು ಆಡುತ್ತಿದ್ದ ಆಟ, ಮರೆಯಾಗೇ ಹೋಯ್ತೇ?

೬. ವರ್ಷಕ್ಕೊಮ್ಮೆ, ಅನೇಕ ಊರುಗಳಲ್ಲಿ ಧರ್ಮರಾಯಸ್ವಾಮಿಯ ದೇಗುಲಗಳಲ್ಲಿ ನಡೆಯುವ ಉತ್ಸವ.

ರಚಿಸಬೇಕಾದ ಪದಪುಂಜ

ಜಗತ್ತಿನ ಮೂರನೆಯ ಅತಿದೊಡ್ಡ ಈ ಜಲ ಸಂಪತ್ತಿಗೂ, ನಮ್ಮ ದೇಶಕ್ಕೂ ಬಲವಾದ ನಂಟು.

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಆಗಸ್ಟ್ ೧೦ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಜೂನ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ವೀಣಾ ಕೌಶಿಕ್, ಸಿಡ್ನಿ
- ಜಿ.ವಿ. ದ್ವಾರಕಾನಾಥ್, ಕೆ.ಜಿ.ಎಫ್
- ಮಹೇಶ್ ಎಚ್. ಸಿ
- ನಂದಿನಿ ರಾಮಕೃಷ್ಣ

1. ತನ್ನ ಹೆಸರಿನಿಂದಲೇ ಸಂತೋಷವನ್ನು ಹೆಚ್ಚಿಸುತ್ತಿದ್ದ ಉತ್ತರಭಾರತದ ದೊರೆ.

ಹ	ರ್ಷ	ವ	ರ್ಧ	ನ

2. ಗಣೇಶ ತನ್ನ ಸೊಂಡಿಲಿನಲ್ಲೇ ಇರಿಸಿಕೊಂಡಿರುವ ಪ್ರಿಯವಾದ ತಿನಿಸು.

ಮೋ	ದ	ಕ

3. ರಘುವಂಶದಲ್ಲಿ ಜನಿಸಿದ್ದರಿಂದ ರಾಮನಿಗೆ ಈ ಹೆಸರು.

ರಾ	ಘ	ವ

3. ಬಲು ಪುಟ್ಟದಾದರೂ ಅಂಬೆಯ ಪತಿಯ ಪೂಜೆಗೆ ತುಂಬಾ ಶ್ರೇಷ್ಠವಾದ ಹೂವಿದು.

ತುಂ	ಬೆ

4. ಅಮೃತ ಹೇಳಿದ ಸಂಸ್ಕೃತದ ಸುಳ್ಳು

ಅ	ನೃ	ತ

5. ಜೇನು ಹೀರಲು ಹೂವಿಗೆ ಬಂದ ದುಂಬಿ ನಡೆಸಿದ ಮತ್ತೊಂದು ನೈಸರ್ಗಿಕ ಕ್ರಿಯೆ

ಪ	ರಾ	ಗ	ಸ್ಪ	ರ್ಶ

ಉತ್ತರ :- ಕವಿಗಳಿಗೂ ಅರಸರಿಗೂ ಮಾರ್ಗದರ್ಶಿ ರಚಿಸಿದ ಕನ್ನಡನಾಡಿನ ಖ್ಯಾತ ದೊರೆ.

ಅ	ಮೋ	ಘ	ವ	ರ್ಷ	ನೃ	ಪ	ತುಂ	ಗ

ATTENTION INVESTORS

NEW HOMES AT BLAKES CROSSING
ONLY 31KM FROM ADELAIDE CBD

Turnkey investment packages
from under $299,000*

Deposit only $2,000*

BOOK AN APPOINTMENT WITH UMESH TODAY TO START YOUR INVESTMENT JOURNEY!

Call 0401 034 456
Email umesh.nagasandra@burbank.com.au

*Terms & conditions apply

Burbank
#noplacelikehome

ಜಾಣ ಕರ್ನಾಟಕ

೧. ಬೆಂಗಳೂರು ಜಿಲ್ಲೆಗೆ ಸೇರಿದರೂ ತುಮಕೂರಿನ ಮೊದಲ ಕಲೆಕ್ಟರ್ ಹೆಸರಿನಲ್ಲಿರುವ ಈ ತಾಲೂಕು ಯಾವುದು

೨. ಹೊಸೂರಿನಿಂದ ಹೊರಟು ಈ ತಾಲೂಕಿನಲ್ಲಿ ಕೊನೆಗೊಳ್ಳುವ ರಾಷ್ಟ್ರೀಯ ಹೆದ್ದಾರಿ ಯಾವುದು

ಸರಿ ಉತ್ತರಕ್ಕೆ ಪುಟ ೨೦ ನೋಡಿ

ಒಗಟು - ಉತ್ತರ

೧. ಹಪ್ಪಳ ೨. ಪೆನ್ (ಲೇಖನಿ)

ಹಾಸ್ಯ ಚಿಲುಮೆ

ತಿಮ್ಮ:ಜೀವನದಲ್ಲಿ ಏನು ಆಗ್ಬೇಕು ಅಂದ್ಕೊಂಡಿದ್ದೀಯಾ?

ಗುಂಡ: ನಾನೂ ನನ್ನ ತಂದೆಯಂತೆ ಡಾಕ್ಟರ್ ಆಗ್ಬೇಕೂ ಅಂದ್ಕೊಂಡಿದ್ದೀನಿ.

ತಿಮ್ಮ:ಹಾಗಾದ್ರೆ ನಿನ್ನ ತಂದೆ ಡಾಕ್ಟರಾ?

ಗುಂಡ:ಇಲ್ಲಾ ಅವರೂ ಡಾಕ್ಟರ್ ಆಗ್ಬೇಕೂ ಅಂದ್ಕೊಂಡಿದ್ರಂತೆ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ - ಸುಗಮ ಕನ್ನಡ ಕೂಟ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ರಚನೆ: ಪುಷ್ಪವಲ್ಲಿ ಚಂದ್ರಶೇಖರ್, ಕೆಂಗೇರಿ

ಕಥೆಯಾದವನು

ಲೇಖಕರು:
ನಾಗಶೈಲ ಕುಮಾರ್

"ನಿಮಗೇನಾದರೂ ಸತ್ಯ ಗೊತ್ತ?" ಗಲಿಬಿಲಿಯಾಗಬೇಡಿ, ನಾನು ಹೇಳಿದ ಸತ್ಯ, ಒಬ್ಬನ ಹೆಸರು. ಬರೀ ಸತ್ಯ ಅಂತ ಮಾತ್ರ ಹೇಳಿ, ಗೊತ್ತ ಎಂದರೆ ಹೇಗೆ? ಜೊತೆಗೆ ನಾರಾಯಣಾನೋ, ಮೂರ್ತೀನೋ ಏನಾದ್ರೂ ಇರಬೇಕಲ್ವಾ ಅಂದುಕೊಳ್ತೀರಾ ಅಂತ ನಂಗೊತ್ತು.
ಆದರೆ ಅವನು ಯಾರ್ಯಾರ ಹತ್ರ ಏನೇನು ಹೇಳ್ಕೊಂಡಿರ್ತಾನೋ ನಂಗೊತ್ತಿಲ್ಲ. ಆದ್ರೆ ನಾನು ಮುಂದೆ ಹೇಳೋ ಕಥೆಯಿಂದ ಖಂಡಿತ ನೀವು ಅವನು ಗೊತ್ತೋ ಇಲ್ವೋ ಅಂತ ಹೇಳ್ತೀರಾ ಅಂತ ನಂಗೆ ನಂಬಿಕೆ ಇದೆ. ಅವನನ್ನ ನೀವೇನಾದ್ರೂ ಇತ್ತೀಚೆಗೆ ಕಂಡಿದ್ರೆ ಅಥವಾ ಅವನು ಎಲ್ಲಿದ್ದಾನೆ ಅಂತೇನಾದ್ರೂ ಗೊತ್ತಿದ್ರೆ ನನಗೆ ತಿಳಿಸ್ತೀರಾ, ದಯವಿಟ್ಟು.
ಅವನ ಬಗ್ಗೆ ನಾನು ಹೇಳೋ ಕಥೆ ಒಂಥರಾ ಅಲ್ಲಿಂದಿಲ್ಲಿ ಇಲ್ಲಿಂದಲ್ಲಿ ತೂರ್ಕೊಂಡು ಹೋಗುತ್ತೆ, ಅವನ ತರಾನೆ, ಆಗ್ಲೆ ನಿಮಗೆ ನಾನು ಸರಿಯಾಗಿ ಕಥೆ ಹೇಳಕ್ಕಾಗೋದು".

****

ತುಮಕೂರಿನಲ್ಲಿ ಈಗ ಸಾಕಷ್ಟು ಬದಲಾವಣೆಗಳಾಗಿರಬಹುದು. ಒಂದು ಕಾಲದಲ್ಲಿ ನನಗೆ ಎರಡನೇ ಮನೆಯಂತಿತ್ತು ತುಮಕೂರು. ಮತ್ತೆ ಬಹಳ ವರ್ಷಗಳ ನಂತರ ನೆಂಟರ ಮನೆ ಮದುವೆಗೆಂದು ಹೋಗಿದ್ದೆ. ಭದ್ರಮ್ಮನ ಚತ್ರದಲ್ಲಿ ಮದುವೆ.
ನನಗೆ ಮದುವೆಗಿಂತ ಹೆಚ್ಚಾಗಿ ಊರನ್ನು ನೋಡುವ ಆಸೆ ಹೆಚ್ಚು. ಸರಿ ಹಾಗೇ ಸುತ್ತಾಡಿಕೊಂಡು ಬರೋಣವೆಂದು ಹೊರಟವನಿಗೆ, ಇದ್ದಕ್ಕಿದ್ದ ಹಾಗೇ ಸತ್ಯನ ನೆನಪಾಯಿತು. ಇಲ್ಲೇ ಸೋಮೇಶ್ವರ ಎಕ್ಸ್ಟೆನ್ಷನ್ ನಲ್ಲಿ ಶೆಟ್ಟಿಹಳ್ಳಿ ರಸ್ತೆಯಲ್ಲಿ ಅವರ ಮನೆ, ಅವನು ಸಿಗುವುದು ಅನುಮಾನವೇ, ಅವರ ಮನೆಯವರನ್ನಾದರೂ ಮಾತನಾಡಿಸಿಕೊಂಡು ಬರೋಣ ಅನ್ನಿಸಿತು. ರೈಲ್ವೇ ಲೈನ್ ದಾಟಿ ಮುಂದೆ ಹೋದರೆ ಮುಖ್ಯ ರಸ್ತೆಯಲ್ಲಿ ಬಲಭಾಗಕ್ಕೆ ಅವರ ಮನೆ. ಸುತ್ತಮುತ್ತಲೂ ಆ ಮನೆಯಂತಹ ಭವ್ಯವಾದ ಕಟ್ಟಡ ಬೇರೊಂದಿರಲಿಲ್ಲ. ಹಿರೇಹಳ್ಳಿಯ ತಮ್ಮ ಕಾರ್ಖಾನೆಗೆ ಓಡಾಡಲು ಅನುಕೂಲವೆಂದು ಊರಾಚೆಗೆ ಮನೆ ಕಟ್ಟಿಕೊಂಡಿದ್ದರು ಸತ್ಯನ ತಂದೆ.
ಮನೆಯ ಬಾಗಿಲು ತೆರೆದೇ ಇತ್ತು, ಆದರೆ ಹೊರಗೆ ಯಾರೂ ಕಾಣಲಿಲ್ಲ. ಕರೆ ಗಂಟೆಯನ್ನು ಒತ್ತಿದ ಹಲವಾರು ನಿಮಿಷಗಳ ನಂತರ ಒಳಗಿನ ಕೋಣೆಯಿಂದ ಸತ್ಯನ ತಾಯಿ ಹೊರಬಂದರು.
"ಯಾರಪ್ಪ ನೀವು, ಯಾರು ಬೇಕಿತ್ತು?"
"ನಾನಮ್ಮ ಸದಾನಂದ, ಗುರುತು ಸಿಗಲಿಲ್ವಾ?"
"ಬನ್ನೀಪ್ಪಾ ಒಳ್ಗೆ, ಯಾರೂ, ಗೊತ್ತಾಗಲಿಲ್ಲಪ್ಪ".
ಮನಸ್ಸಿಗೆ ಪಿಚ್ಚೆನಿಸಿತು. ಇವರ ಮನೆಗೆ ಎಷ್ಟು ಸಲ ಬಂದಿದ್ದೇನೆ. ಕಳೆದ ಸಲ ಬಂದಾಗ ಮೂರು ದಿನ ಇವರ ಮನೆಯಲ್ಲೇ ಉಳಿದುಕೊಂಡಿದ್ದೆ ಕೂಡ. ಬೆಂಗಳೂರಿನಲ್ಲಿ ಸತ್ಯನ ಹತ್ತಿರದ ಸ್ನೇಹಿತ ನಾನೇ ಎಂದು ಕೂಡ ಇವರಿಗೆ ಗೊತ್ತು. ಇಷ್ಟು ಬೇಗ ಮರೆತು ಬಿಟ್ಟರಾ?
"ನಾನಮ್ಮ, ಸತ್ಯನ ಗೆಳೆಯ, ಹೋದ ವರ್ಷ ನಿಮ್ಮನೇಗೆ ಬಂದು ಮೂರುದಿನ ಇದ್ದು, ನಿಮ್ಮ ಕೈ ಊಟಾನ ಯಾವತ್ತೂ ಮರೀದ ಹಾಗೆ ತಿಂದ್ಕೊಂಡು ಹೋಗಿದ್ನಲ್ವಾ".
"ಓ ಸತ್ಯನ ಗೆಳೆಯಾನಾ..." ಅವರ ಧ್ವನಿಯಲ್ಲಿ, ತಾತ್ಸಾರ, ಉದಾಸೀನ, ಕೋಪ, ದುಃಖ ಎಲ್ಲವೂ ತುಂಬಿತ್ತು. ಒಂದು ಕ್ಷಣ ನನ್ನನ್ನೇ ದಿಟ್ಟಿಸಿ, ಕುಳಿತುಕೋ ಎಂದು ಸಹ ಹೇಳದೆ ಒಳ ನಡೆದರು.
ನನಗೆ ಯಾಕಾದರೂ ಇಲ್ಲಿ ಬಂದೆನೋ, ಈಗಲೇ ಹೊರಟುಬಿಡೋಣವೆನ್ನಿಸಿತು. ಆದರೆ ಹಾಗೆ ಹೇಳದೇ ಹೋಗುವುದು ಮರ್ಯಾದೆಯಲ್ಲ, ಅಲ್ಲದೆ ಅವರು ಮತ್ತೆ ಹೊರಬಂದು ಮಾತನಾಡಿಸುತ್ತಾರೆಂಬ ಭರವಸೆಯಿಂದ ಅಲ್ಲಿಯೇ ಇದ್ದ ದೀವಾನದ ಮೇಲೆ ಮುಜುಗರದಿಂದ ಹಿಡಿಯಾಗಿ ಕುಳಿತೆ.
ಒಳಗೆ ಅಡುಗೆಮನೆಯಿಂದ ಗೊಣಗಿಕೊಳ್ಳುವುದರೊಡನೆ ಪಾತ್ರೆಗಳ ಸದ್ದೂ ಕೇಳಿಬರುತ್ತಿತ್ತು. ಗೋಡೆಗಳ ಮೇಲಿದ್ದ ಫೋಟೋಗಳ ನೋಡುತ್ತಾ ಸುಮಾರು ಹೊತ್ತು ಕಳೆದ ಮೇಲೆ, ಸತ್ಯನ ತಾಯಿ ಹೊರಬಂದರು. ಮಾತನ್ನೇ ಆಡದೆ ದೊಡ್ಡ ಲೋಟದ ತುಂಬಾ ತಣ್ಣನೆಯ ಶರಬತ್ತನ್ನು ನನ್ನ ಕೈಗಿತ್ತರು. ಹೊರಗಿನ ಬಿಸಿಲ ಬೇಗೆಗೆ, ಮತ್ತು ಅವರ ಉಪಚಾರದ ಪರಿಗೆ ಬೆವರಿದ್ದ ನನ್ನ ಮೈ ಮನಸ್ಸುಗಳಿಗೆ ಆ ಶರಬತ್ತು ಕೊಂಚ ಉಪಶಮನ ನೀಡಿತ್ತು.
ನಾನೂ ಮಾತನ್ನಾಡದೆ ಕುಡಿದು ಮುಗಿಸಿ, ಹೊರಡುತ್ತೇನೆಂಬ ಸೂಚನೆ ನೀಡುವಂತೆ ಏಳಲಣಿಯಾದೆ.
"ನಿಮ್ಮ ಹತ್ತಿರ ಎಷ್ಟಪ್ಪಾ ಸಾಲ ಮಾಡಿದ್ದಾನೆ ಅವನು? ಅದನ್ನ ವಾಪಸ್ ಕೇಳೋಣ ಅಂತ ಬಂದ್ರಾ ನೀವು?" ಅಷ್ಟು ಹೊತ್ತೂ ಮಾತನ್ನೇ ಆಡದಿದ್ದವರು, ಇದ್ದಕ್ಕಿದ್ದಂತೆ ತನಿಖೆ ನಡೆಸುವ ಪೋಲೀಸರ ಹಾಗೆ ಪ್ರಶ್ನಿಸಿದರು. ಅನಿರೀಕ್ಷಿತವಾಗಿ ಬಂದೆರಗಿದ ಪ್ರಶ್ನೆ ನನ್ನನ್ನು ತಬ್ಬಿಬ್ಬುಗೊಳಿಸಿತ್ತು. ಆದರೂ ಸಾವರಿಸಿಕೊಂಡು ನುಡಿದೆ

ಮುಂದಿನ ಪುಟ ನೋಡಿ ...

"ಅಮ್ಮ ಖಂಡಿತವಾಗಿಯೂ ಇಲ್ಲ. ಅವನನ್ನು ನೋಡಿ, ಅವನ ವಿಷಯ ಕೇಳಿ ತುಂಬಾ ದಿನ ಆಯ್ತು. ಅವನು ಎಲ್ಲಿದ್ದಾನೆ, ಹೇಗಿದ್ದಾನೆ ಅಂತ ಕೂಡ ಗೊತ್ತಿಲ್ಲ. ಎಲ್ಲರೂ ಅವನ ಬಗ್ಗೆ ಅದೂ ಇದೂ ಕಥೆಗಳ ಹೇಳ್ತಾರೆ, ಕೇಳಿ ಬೇಜಾರಾಗುತ್ತೆ. ನಿಮ್ಮನ್ನಾದ್ರು ಕೇಳಿ ಅವನನ್ನ ಭೇಟಿ ಮಾಡೋಣ ಅಂದ್ಕೊಂಡು ಬಂದೆ. ಅದೂ ಅಲ್ದೆ ಅವನಿಗೆ ನಾನು ಯಾವ ಸಾಲಾನೂ ಕೊಟ್ಟಿಲ್ಲ, ಕೊಡೋದೂ ಇಲ್ಲ.ಅವನಿಗೆ ನನ್ನ ಬಗ್ಗೆ ಭಯ ಇದೆ. ಅದೂ ಅಲ್ದೆ ನನಗೆ ಚೆನ್ನಾಗಿ ಗೊತ್ತು, ಅವನಿಗೆ ಸಾಲ ಮಾಡೋ ಅಂತಹ ಅವಶ್ಯಕತೆ ಏನಿಲ್ಲಾ ಅಂತ", ಎಂದೆ.

ಕೊಂಚ ಸಮಾಧಾನಗೊಡಿದ್ದ ಅವನ ತಾಯಿಗೆ, ಮಗನ ಬಗ್ಗೆ ತಿಳಿದ ಆಪ್ತರೊಬ್ಬರು ದುಃಖ ಹಂಚಿಕೊಳ್ಳಲು ಸಿಕ್ಕ ಹಾಗಾಗಿತ್ತು. ನನ್ನ ನೆನಪೂ ಬಂದಿತ್ತೋ ಏನೋ, ನಿಧಾನವಾಗಿ ನುಡಿದರು "ಏನೋಪ್ಪ, ಇವನು ಯಾಕಾದ್ರೂ ಹೀಗಾದ್ನೋ ಆ ದೇವರಿಗೇ ಗೊತ್ತು. ಅವನಿಗೆ ನಾವೇನು ಕಡಿಮೆ ಮಾಡಿದ್ದೀವಿ ಹೇಳು?. ಇತ್ತೀಚೆಗಂತೂ ಅವನಿಗೆ ಸಾಲ ಕೊಟ್ಟಿರೋರು ಅವನನ್ನ ಹುಡುಕಿಕೊಂಡು ಮನೆಗೆ ಬರೋದು ಹೆಚ್ಚಾಗಿ ಬಿಟ್ಟಿದೆ. ಬೀದೀಲಿ ನಿಂತ್ಕೊಡು ಕೂಗಾಡಿ ಹೋಗ್ತಾರೆ, ನಮಗಂತೂ ಹೊರಗೆ ತಲೆ ಎತ್ತಿ ತಿರುಗಾಡದ ಹಾಗಾಗಿ ಬಿಟ್ಟಿದೆ".

ಅಷ್ಟು ಹೊತ್ತಿಗೆ ಒಳಗಿನ ಕೋಣೆಯಿಂದ ಸತ್ಯನ ತಂದೆ ಹೊರಬಂದರು. ಕೈಮುಗಿದೆ.ಅವರು ನನ್ನನ್ನು ಗುರುತಿಸಿ ''ಏನಪ್ಪಾ ಚೆನ್ನಾಗಿದ್ದೀಯಾ? ಏನಂತಾನೆ ನಿನ್ನ ಸ್ನೇಹಿತ", ಎಂದರು.

"ನಾನೂ ನೋಡೇ ಇಲ್ಲ ಸಾರ್, ಸುಮಾರು ತಿಂಗಳುಗಳೇ ಆಯ್ತು, ಕೆಲ್ಸಕ್ಕೆ ಬರೋದನ್ನೇ ನಿಲ್ಸಿಬಿಟ್ಟಿದ್ದಾನೆ. ಮನೆಯಲ್ಲೇ ನಿಮ್ಮ ಜೊತೇನೇ ಇದ್ದಾನೇನೋ ನೋಡಿಕೊಂಡು ಹೋಗೋಣಾಂತ ಬಂದೆ".

" ಅವನಿಗೆ ಅಪ್ಪ, ಅಮ್ಮ, ಮನೆ ಏನೂ ಇಲ್ಲ. ನಾವೂ ಅಷ್ಟೆ, ಅವನ ಮೇಲಿನ ವ್ಯಾಮೋಹ ಬಿಟ್ಟೇ ಬಿಟ್ಟಿದ್ದೀವಿ. ಅವನು ಮಾಡ್ತಾ ಇರೋ ಕೆಲ್ಸಗಳನ್ನ ನೋಡಿದರೆ ನಮ್ಮ ವಂಶದಲ್ಲಿ ಹುಟ್ಟಿದವನಾ ಇವನು ಅನ್ಸುತ್ತೆ'', ಮಾತು ನಿಲ್ಲಿಸಿ ಪತ್ನಿಯ ಕಡೆ ನೋಡಿದರು, ಅವರ ನಿರ್ಲಿಪ್ತ ಭಾವ ನೋಡಿ ತಲೆಯಾಡಿಸಿ ಮುಂದುವರೆಸಿದರು, ''ಹೋದ ತಿಂಗಳು ಮೈಸೂರಿಗೆ ಯಾವ್ದೋ ಕೆಲ್ಸದ ಮೇಲೆ ಹೋಗಿದ್ದೆ, ಹಾಗೇ ಬರ್ತಾ ಅರಸೀಕೆರೆಲೂ ಸ್ವಲ್ಪ ಕೆಲ್ಸ ಇತ್ತು. ನಮ್ಮ ಕಾರು ಕೆಟ್ಟೋಗಿ, ಮೈಸೂರಿಂದ ಅರಸೀಕೆರೆಗೆ ರೈಲ್ನಿನಲ್ಲಿ ಹೋಗಬೇಕಾಗಿ ಬಂತು. ರೈಲಿನಲ್ಲಿ ಒಂದಷ್ಟು ಜನ ಮಕ್ಕಳು ಹಾಡಿಕೊಂಡು ಯಾತಕ್ಕೋ ಚಂದಾ ಕೇಳುತ್ತಿದ್ದರು. ನಾನು ಕಿಟಕಿ ಪಕ್ಕ ಪೇಪರ್ ಓದುತ್ತಾ ಕುಳಿತಿದ್ದೆ...,'' ಒಂದು ಕ್ಷಣ ಮೌನವಾದವರು, ಭಾರವಾದ ಧ್ವನಿಯಲ್ಲಿ ಮತ್ತೆ ಮುಂದುವರೆಸಿದರು, "ಆ ಮಕ್ಕಳ ಮಾತಿನ ನಡುವೆ ನನಗೆ ಚಿರಪರಿಚಿತವಾದ ಧ್ವನಿ ನುಡಿದಿತ್ತು, ''ಅಕ್ಕಾ ಅಣ್ಣಾ, ನೋಡಿ ಎಷ್ಟು ಮುದ್ದಾಗಿವೆ ಈ ಮಕ್ಕಳು, ಕೆಲವಕ್ಕೆ ಕಣ್ಣಿಲ್ಲ, ಕೆಲವಕ್ಕೆ ಕೇಳ್ಸಲ್ಲ, ಎಲ್ಲಕ್ಕಿಂತ ಹೆಚ್ಚಾಗಿ ಇವರು ಯಾರಿಗೂ ಅಪ್ಪಾಅಮ್ಮ ಇಲ್ಲ. ಈ ಮಕ್ಕಳಿಗೆ ತಂದೆತಾಯಿ ಇಲ್ಲದ ಕಷ್ಟ ತಿಳಿಯದ ಹಾಗೆ ನೋಡಿಕೊಳ್ಳಬೇಕು ಅಂತ ನನ್ನ ಕರುಳು ಕೂಗುತ್ತೆ. ಯಾಕೆ ಅಂದ್ರೆ ನಾನೇ ಒಬ್ಬ ಅನಾಥ. ಅನಾಥರ ಕಷ್ಟ ನನಗೆ ಚೆನ್ನಾಗಿ ಗೊತ್ತು. ನಾನೇನೋ ಯಾರೋ ನಿಮ್ಮಂಥ ಪುಣ್ಯಾತ್ಮರು ಕೊಟ್ಟಿದ್ದನ್ನು ತಿಂದುಕೊಂಡು ಈ ಮಟ್ಟಕ್ಕೆ ಬಂದಿದ್ದೀನಿ. ಆ ಅನ್ನದ ಋಣಾನಾ ಈ ಮಕ್ಕಳ ಸೇವೆ ಮಾಡ್ಕೊಂಡು ತೀರಿಸಿಕೊಳ್ತಾ ಇದ್ದೀನಿ. ನಿಮ್ಮ ಕೈಲಾದ ಸಹಾಯ ಮಾಡಿ ನೀವೂ ಪುಣ್ಯ ಕಟ್ಟಿಕೊಳ್ಳಿ''. ನಾನು ಕೋಪದಿಂದ ಕುದಿದು ಹೋಗಿದ್ದೆ, ಕೆಲವು ಕ್ಷಣಗಳಲ್ಲೇ ಅವನು ನಾನಿರುವ ಕಡೆಗೂ ಬರುತ್ತಾನೆ, ಎಂದು ಓದುತ್ತಿದ್ದ ಪತ್ರಿಕೆ ಮುಖಕ್ಕೆ ಅಡ್ಡ ಹಿಡಿದು ಕುಳಿತೆ. ಎಲ್ಲರ ಬಳಿಯೂ ಕೈಚಾಚುತ್ತಾ ಬರುತ್ತಿದ್ದ ಮಗುವೊಂದು ನನ್ನ ಬಳಿಯೂ ಬಂದು, ನಾ ಅಡ್ಡ ಹಿಡಿದಿದ್ದ ಪೇಪರನ್ನು ಪಕ್ಕ ಸರಿಸಿ ಕೈ ಚಾಚಿತು. ಆಗ ಎದುರಿಗೇ ನಿಂತಿದ್ದ ಆ...'', ನಾಚಿಕೆ, ಸಂಕಟಗಳಿಂದ ಉರಿಯುತ್ತಿದ್ದ ಅವರಿಗೆ ಮಗನನ್ನು ಬೈಯ್ಯಲೂ ಪದಗಳು ತೋರದೆ, ''ನನ್ನ ನೋಡಿ ಭೂತ ದರ್ಶನವಾದಂತೆ ಹೊರಟು ಹೋದ ಪಾಪಿ'', ಎಂದು ಮಾತು ನಿಲ್ಲಿಸಿದರು.

"ಇವನಿಗೆ ಏನು ಕಡಿಮೆಯಾಗಿದೆ ಅಂತ ಹೀಗೆಲ್ಲಾ ಮಾಡ್ತಿದ್ದಾನೋ, ನಮ್ಮ ಹೊಟ್ಟೆ ಉರಿಸೋದಕ್ಕೆ ಬೇಕಂತ ಮಾಡ್ತಾನೇನೋ". ಅವರಮ್ಮ ಸಂಕಟ ಪಟ್ಟರು.

" ನಾನೂ ಅವನಿಗೆ ಎಷ್ಟೋ ಹೇಳಿದೆ ಅಮ್ಮ. ಒಳ್ಳೇ ಕೆಲಸ ಇದೆ ನಿನಗೆ ಯಾರಿಗೂ ಇಲ್ಲದ ಅನುಕೂಲಗಳು ನಿನಗಿದೆ. ನಿನ್ಗೆ ಇಲ್ಲಿ ಇಷ್ಟವಾಗದಿದ್ದರೆ ಊರಿಗೆ ಹಿಂದಿರುಗಿ ಹೋಗು, ನಿಮ್ಮದೇ ಆದ ಕಾರ್ಖಾನೆ ಇದೆ. ಅಲ್ಲೇ ಇದ್ದು ನಿಮ್ಮಪ್ಪ ಅಣ್ಣ ಜೊತೆ ನೋಡಿಕೋ. ನಮ್ಮೆಲ್ಲರಿಗಿಂತ ಬುದ್ಧಿವಂತ ನೀನು, ಆ ನಿನ್ನ ಬುದ್ಧಿವಂತಿಕೇನ ಒಳ್ಳೆ ರೀತಿಯಲ್ಲಿ ಉಪಯೋಗ ಪಡಿಸಿಕೋ. ಅದು ಬಿಟ್ಟು ನೀನೀಗ ಹೋಗ್ತಾ ಇರೋ ದಾರಿ ಸರಿ ಇಲ್ಲ, ಅಂತ ಅವನಿಗೆ ನಾನು ಸದಾ ಹೇಳ್ತಾನೇ ಇರ್ತಿದ್ದೆ''. ನಾನು ಹೇಳ್ದಾಗಲೆಲ್ಲಾ,

''ಹೌದು ಸದಾ, ಯಾಕೋ ಗೊತ್ತಿಲ್ಲ, ಈ ನಡುವೆ ನಾನು ವಿಪರೀತ ಹಾಳಾಗಿ ಹೋಗಿದ್ದೀನಿ ಅಲ್ವಾ. ನೋಡು ನೀನಾಗೋ ಹೊತ್ಗೆ ನಂಗೆ ನಿಜ ಹೇಳಿ ಬುದ್ಧಿ ಹೇಳ್ತಿಯಾ. ಬೇರೆಯವರೆಲ್ಲಾ ನನ್ನ ದುಡ್ಡು ಖಾಲಿ ಆಗೋವರ್ಗೂ ನನ್ನ ಜೊತೆ ಇದ್ದು ಮಜಾ ಮಾಡಿ, ಆ ಮೇಲೆ ಕೈಕೊಟ್ಟು ಹೋಗ್ತಾರೆ. ಇನ್ಮೇಲೆ ಆ ತರ ಇರಲ್ಲ, ನೀನೊಬ್ಬ ನನ್ನ ಜೊತೆ ಇದ್ರೆ ಸಾಕು, ಅಂತೆಲ್ಲಾ ಬೇಜಾರು ಮಾಡ್ಕೋತಿದ್ದ. ಆ ಮೇಲೆ ಗೊತ್ತಾಯ್ತು ಅದೂ ಕೂಡ್ ನಾಟಕ ಅಂತ", ಮುಂದೇನೂ ಹೇಳದೆ ಅವರ ಮುಖ ನೋಡಿದೆ. ನಾನೂ ಸತ್ಯನ ಬಗ್ಗೆ ಮಾತನಾಡೊದಷ್ಟೂ ಅವರ ಬೇಸರ ಹೆಚ್ಚಾಗುತ್ತಿತ್ತು.

ಮದುವೆ ಮನೆಯಿಂದ ಹೊರಟು ಬಂದು ಆಗಲೇ ಸಾಕಷ್ಟು ಸಮಯವಾಗಿತ್ತು. ಅಮ್ಮ ನನಗಾಗಿ ಊಟಕ್ಕೆ ಕಾದಿರಬಹುದು, ಇನ್ನು ಹೊರಡೋಣವೆಂದುಕೊಂಡು,

"ಇನ್ನು ನಾನು ಹೊರಡ್ತೀನಿ ಸಾರ್, ಬರ್ತೀನಮ್ಮ," ಎಂದು ಹೇಳಿ ಹೊರಟೆ.

ಮುಂದಿನ ಪುಟ ನೋಡಿ ...

"ಇನ್ನೊಂದು ಹತ್ ನಿಮಿಷ ಕೂತ್ಕೋಳಪ್ಪಾ, ಬಿಸಿಬಿಸಿಯಾಗಿ ಅಡುಗೆ ಮಾಡ್ಬಿಡ್ತೀನಿ, ಇವರ್ದೂ ಊಟ ಆಗಿಲ್ಲ, ಜೊತೇಲಿ ಊಟ ಮಾಡ್ಕೊಂಡು ಹೊರ್ಡುವಂತೆ", ಎಂದರು ಆಕೆ.

"ಇಲ್ಲಮ್ಮ ಮದ್ವೆಗೆ ಬಂದು ಅಲ್ಲಿ ಊಟ ಮಾಡ್ಲಿಲ್ಲಾ ಅಂದ್ರೆ ಅಷ್ಟೆ ಆಮೇಲೆ ನಮ್ಮತ್ತಿಗೆ, ಅದೂ ಅಲ್ದೆ ಅಮ್ಮನೂ ನಂಗೋಸ್ಕರ ಕಾಯ್ತಿರ್ತಾರೆ. ಊಟ ಮುಗಿಸ್ಕೊಂಡು ತಕ್ಷಣಾನೆ ಊರಿಗೆ ಹೊರ್ಡಬೇಕು ಬೇರೆ. ಇನ್ನೊಂದ್ಸಲ ಖಂಡಿತ ಬರ್ತೀನಿ".

ಹೆಚ್ಚು ಬಲವಂತ ಮಾಡುವ ಮನಸ್ಥಿತಿಯಲ್ಲಿರದ ಅವರು "ನೋಡಪ್ಪಾ ಅವನೇನಾದ್ರೂ ನಿನಗೆ ಸಿಕ್ಕಿದ್ರೆ ಹೇಗಾದ್ರು ಮಾಡಿ ಒಂದ್ಸಲ ಇಲ್ಲಿಗೆ ಕರ್ಕೊಂಡು ಬರ್ತೀಯಾ", ಅಳುತ್ತಲೇ ಸತ್ಯನ ಅಮ್ಮ ನುಡಿದರು. ಸತ್ಯನ ತಂದೆ ನಿರ್ಲಿಪ್ತರಾಗಿಯೇ "ಹೋಗಿ ಬಾಪ್ಪ" ಎಂದಷ್ಟೇ ನುಡಿದು ಒಳಗೆ ಹೊರಟು ಹೋದರು.

ದೇವರಾಯನ ದುರ್ಗ ಬೆಟ್ಟಗಳ ಸಾಲಿನ ಬಂಡೆಗಳು ಹೆಂಚಿನಂತೆ ಕಾದು ಆ ಬಿಸಿಯಲ್ಲೇ ತುಮಕೂರು ಬೆಂದು ಹೋಗತ್ತದೇನೋ ಎನ್ನುವಂತೆ ಮಧ್ಯಾನ್ಹದ ಬಿಸಿಲು ರಣಗುಡುತ್ತಿತ್ತು. ಇನ್ನೂ ಸೋಮೇಶ್ವರ ಬಡಾವಣೆ, ನಂತರ ಹೈಸ್ಕೂಲ್ ಮೈದಾನ ದಾಟಿ ಹೋಗಬೇಕು. ಹೊಟ್ಟೆ ಚುರುಗುಡುತ್ತಿತ್ತು. ಅರಳೀಕಟ್ಟೆಯ ಎದುರಿನ ಬೇಕರಿಯಿಂದ ತಿಂಡಿಗಳ ಪರಿಮಳ ಹಸಿವನ್ನು ಹೆಚ್ಚಿಸಿತ್ತು. ಗಾಜಿನ ಕಪಾಟಿನಲ್ಲಿ ಜೋಡಿಸಿಟ್ಟಿದ್ದ, ಬನ್ನುಗಳು, ಬ್ರೇಡ್ಡು, ರಾಗಿಬಿಸ್ಕತ್ತುಗಳ ನೋಡುತ್ತಾ ಮತ್ತೆ ಸತ್ಯನ ಹಿಂದೋಡಿತು ಮನಸ್ಸು.

****

"ಅಕ್ಕಾ ತಗೊಳ್ಳಿ ರಾಗಿ ಬಿಸ್ಕತ್ತು, ನಿಮಗೋಸ್ಕರ ನಮ್ಮ ಬೇಕರಿ ಸೋಮಣ್ಣಂಗೆ ಹೇಳಿ ಫ್ರೆಶ್ ಆಗಿ ಮಾಡಿಸ್ಕೊಂಡು ತಂದಿದ್ದೀನಿ," ತಾನು ತಂದಿದ್ದ ಪೊಟ್ಟಣವನ್ನು ತಾನೇ ಮೂಸು ನೋಡುತ್ತಾ ಅಕ್ಕನ ಕೈಗಿತ್ತ ತಿಂಡಿಯ ಪೊಟ್ಟಣವನ್ನು ಸತ್ಯ.

(ಮುಂದುವರೆಯುವುದು)

ಕರ್ನಾಟಕದ ವಿಶೇಷತೆಗಳು

ಕನ್ನಡ ಮತ್ತು ಕರ್ನಾಟಕದ ವಿಶೇಷಗಳು

- ಕರ್ನಾಟಕದ ಪ್ರಹಸನ ಪಿತಾಮಹ ಎಂದು ಪ್ರಸಿದ್ಧರಾದವರು - ಟಿ ಪಿ ಕೈಲಾಸಂ
- ಹಿರಣ್ಣಯ್ಯ ಮಿತ್ರಮಂಡಳಿಯ ೧೦೦೦೦ಕ್ಕೂ ಹೆಚ್ಚು ಪ್ರದರ್ಶನವಾದ ನಾಟಕ - ಲಂಚಾವತಾರ
- ಬೆಂಗಳೂರಿನಲ್ಲಿರುವ ಗಾಥಿಕ್ ವಾಸ್ತುಶೈಲಿಯ ಕಟ್ಟಡ - ಸೆಂಟ್ರಲ್ ಕಾಲೇಜು
- 1924 ರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧಿಜಿ ಎದುರು ಸ್ವಾಗತ ಗೀತೆ ಹಾಡಿದ ಗಾಯಕಿ - ಗಂಗೂಬಾಯಿ ಹಾನಗಲ್
- ಡಿ ವಿ ಜಿ ಕನ್ನಡಕ್ಕೆ ಅನುವಾದಿಸಿದ ಶೇಕ್ಸ್ಪಿಯರ್ ನ ನಾಟಕ - ಮ್ಯಾಕ್ಬೆತ್
- ಅಮೆರಿಕಾದ ಛಾಯಾಚಿತ್ರ ಸೊಸೈಟಿಯ ಗೌರವ ಸದಸ್ಯತ್ವ ಪಡೆದ ಏಷ್ಯಾದ ಮೊದಲ ವ್ಯಕ್ತಿ ಕನ್ನಡಿಗ - ಸಿ ರಾಜಗೋಪಾಲ್
- 'ಕೊರವಂಜಿ' ಪತ್ರಿಕೆಯ ಮೂಲಕ ಖ್ಯಾತರಾದ ವ್ಯಂಗ ಚಿತ್ರಕಾರ - ಆರ್ ಕೆ ಲಕ್ಷ್ಮಣ್
- ಬೆಂಗಳೂರಿನಲ್ಲಿ ವಿಂಡ್ಸರ್ ಅರಮನೆಯ ಮಾದರಿಯ ಕಟ್ಟಡ - ಬೆಂಗಳೂರು ಅರಮನೆ
- ಕರ್ನಾಟಕದ ಅತ್ಯಂತ ದೊಡ್ಡ ಕಟ್ಟಡ - ವಿಧಾನಸೌಧ
- ಕರ್ನಾಟಕದ ಹೈಕೋರ್ಟ್ ನಿರ್ಮಾಣ - 1868
- ಕರ್ನಾಟಕಾಂಧ್ರ ನಾಟಕ ಸಾರ್ವಭೌಮ ಎಂದು ಪ್ರಸಿದ್ಧಿಯಾದವರು - ಗುಬ್ಬಿ ವೀರಣ್ಣ
- ಕುವೆಂಪುರವರ ರಕ್ತಾಕ್ಷಿ ನಾಟಕಕ್ಕೆ ಮೂಲ ಸ್ಫೂರ್ತಿಯಾದ ಇಂಗ್ಲೀಶ್ ನಾಟಕ - ಹ್ಯಾಮ್ಲೆಟ್

ನೀವು ಮಾಡಿ

ರಾಕೆಟ್ ಸೈನ್ಸ್ !

ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:



ಉದ್ದಕ್ಕೆ ಉದಬಹುದಾದ ಬಲೂನ್

೧೦-೧೫ ಅಡಿ ಉದ್ದದಷ್ಟು ಟ್ವೈನ್ ದಾರ

ಒಂದು ಪ್ಲಾಸ್ಟಿಕ್ ಸ್ಟ್ರಾ

ಅಂಟಿಸಲು ಸೆಲ್ಲೋಟೇಪ್

ವಿಧಾನ:

ದಾರವನ್ನು ಸ್ಟ್ರಾ ಒಳಗೆ ತೂರಿಸಿ ಎರಡು ಚೇರ್ ಗಳ ನಡುವೆ ದಾರವನ್ನು ಕಟ್ಟಿ

ಬಲೂನ್ ಅನ್ನು ಸಾಕಷ್ಟು ಉದಿ ಗಾಳಿ ಹೋಗದಂತೆ ಅದರ ತುದಿ ಹಿಡಿದುಕೊಂಡು ಸೆಲ್ಲೋ ಟೇಪ್ ಉಪಯೋಗಿಸಿ ಚಿತ್ರದಲ್ಲಿ ತೋರಿಸಿದಂತೆ ಸ್ಟ್ರಾ ಗೆ ಅಂಟಿಸಬೇಕು

ಬಲೂನ್ ತುದಿ ಬಿಡುತ್ತಿದ್ದಂತೆ ರಭಸವಾಗಿ ಬಲೂನ್ ಮುಂದೆ ಚಲಿಸುತ್ತದೆ

ಏನಾಗುತ್ತಿದೆ:

ಗಾಳಿಯು ಬಲೂನ್ ಒಳಗೆ ಒತ್ತಡದಿಂದ ಇರುತ್ತದೆ. ಬಲೂನ್ ತುದಿಯನ್ನು ಬಿಟ್ಟ ತಕ್ಷಣ ಇಡೀ ಗಾಳಿ ಒಮ್ಮೆಗೆ ಹೊರಬರಲು ಪ್ರಯತ್ನಿಸಿ ಮುಂಚಲನೆಯನ್ನು ಸೃಷ್ಟಿಸುತ್ತದೆ. ವಿಭಿನ್ನ ಗಾತ್ರದ ಮತ್ತು ಆಕಾರಗಳ ಬಲೂನ್ ಹೆಚ್ಚು ಅಥವಾ ಕಡಿಮೆ ಒತ್ತಡವನ್ನು ರಚಿಸುತ್ತದೆ. ನಿಜವಾದ ರಾಕೆಟ್ ನಲ್ಲಿ ಇಂಧನವನ್ನು ಉರಿಸಿ ಅದರಿಂದ ಒತ್ತಡ ಸೃಷ್ಟಿಸಿಲಾಗುತ್ತದೆ. ಈ ಒತ್ತಡವನ್ನು ಕೆಳಮುಖವಾಗಿ ಹೊರಹೋಗುವಂತೆ ರಚಿಸಿರುವುದರಿಂದ ರಾಕೆಟ್ ಮೇಲಕ್ಕೆ ಹೋಗುತ್ತದೆ. ▪

ಜಾಣ ಕರ್ನಾಟಕ – ಉತ್ತರ

೧. ಡಾಬಸ್ ಪೇಟೆ - ಪುರಾತನವಾಗಿ ಸೋಮಪುರವೆಂದು ಹೆಸರಿದ್ದ ಈ ಊರಿಗೆ, ತುಮಕೂರಿನ ಮೊದಲ ಕಲೆಕ್ಟರ್ ಮೇಜರ್ ಜನರಲ್ ರಿಚರ್ಡ್ ಸ್ಟಿವರ್ಟ್ಸ್ ಡಾಬ್ಸ್ ನೆನಪಿನಲ್ಲಿ ಮರುನಾಮಕರಣವಾಯಿತು

೨. ರಾಷ್ಟ್ರೀಯ ಹೆದ್ದಾರಿ ೨೦೭

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಗಣೇಶೋತ್ಸವ ೨೦೧೯

Whitlam Centre Liverpool

ಸೆಪ್ಟೆಂಬರ್ ೨ ಮತ್ತು ೩
ಶನಿವಾರ ಬೆ ೮-೧೨ ಪೂಜೆ,

ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ೫-೮, ಮಹಾಪ್ರಸಾದ
ಭಾನುವಾರ ಬೆ ೮ ರಿಂದ ೧೧ ಸತ್ಯನಾರಾಯಣ ಪೂಜೆ
ಮ ೧೧ ರಿಂದ ೦೨ ಪ್ರಸಾದ, ಗಣಪತಿ ವಿಸರ್ಜನೆ

Shri Ganesh Desai (Vocal) & Praksh Hegde (Flute) in September

ದಾಸರ ಪದಗಳು, ವಚನ, ಕಗ್ಗ ಹಾಗೂ ಭಾವಗೀತೆಗಳ ಭಾವಪೂರ್ಣ ಗಾಯನ

ಹಾಗು ಇಂಪಾದ ಕೊಳಲುವಾದನ ಮರೆಯದೆ ಭಾಗವಹಿಸಿ.

ಸ್ಥಳ ಮತ್ತು ದಿನಾಂಕ ಅತೀ ಶೀಘ್ರದಲ್ಲೇ ತಿಳಿಸಲಾಗುವುದು.

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.